# ಗಂಗೊಳ್ಳಿ ಟೌನ್ ಸೌಹಾರ್ದ
# ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನೋಂದಣಿ ಸಂಖ್ಯೆ 552, ಕಟ್ಟಡ ಸಂಖ್ಯೆ: 5-215
ರಥಬೀದಿ ಸಮೀಪ, ಮುಖ್ಯರಸ್ತೆ, ಗಂಗೊಳ್ಳಿ - 576 216



ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್
ಸಂಸ್ಥಾಪಕರು




## 106ನೇ ವಾರ್ಷಿಕ ಸಾಮಾನ್ಯ ಸಭೆ
## ವಾರ್ಷಿಕ ವರದಿ 2025-26

ಸಪ್ಟೆಂಬರ್ 20, 2026
ಆದಿತ್ಯವಾರ

ಪೂರ್ವಾಹ್ನ 10-30ಕ್ಕೆ

ಶ್ರೀ ವೀರ ವಿಠಲ ಸಭಾಗೃಹ, ಶ್ರೀ ವಿಠಲ ರಖುಮಾಯಿ ದೇವಸ್ಥಾನ, ಗಂಗೊಳ್ಳಿ
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

# ಅಧ್ಯಕ್ಷರ ಅಂಗಳದಿಂದ



ನೂರಾರು ವರ್ಷಗಳಿಂದ ದೇಶದ ಜನರ ಜೀವನಾಡಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ಸಹಕಾರ ಕ್ಷೇತ್ರವು ಪ್ರಾರಂಭದಲ್ಲಿ ಹೆಚ್ಚು ಉಪಯೋಗಕಾರಿಯಾಗದಿದ್ದರೂ ಸ್ವಾತ್ರಂತ್ರ್ಯ ನಂತರದ ದೇಶದ ಅರ್ಥ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ.

ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣವನ್ನು ಕಂಡ ನಮ್ಮ ದೇಶದಲ್ಲಿ ಸಹಕಾರ ಕ್ಷೇತ್ರವು ಯಾವುದೇ ರೀತಿಯ ಹಿನ್ನಡೆ ಅನುಭವಿಸದೆ ಯಶಸ್ವೀಯಾಗಿ ಕಾರ್ಯನಿರ್ವಹಿಸಿದೆ. ನೋಟು ಅಮಾನ್ಯ, ಜಾಗತೀಕ ಆರ್ಥಿಕ ಮುಗ್ಗಟ್ಟು ಹಾಗೂ ಕರೋನಾದಂತಹ ಅನಿರೀಕ್ಷಿತ ಸಂಕಷ್ಟದ ಸಮಯದಲ್ಲೂ ಯಾವುದೇ ಸಹಕಾರ ಸಂಸ್ಥೆಗಳು ಮುಚ್ಚದೇ ಇರುವುದು, ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸದೇ ಸಿಬ್ಬಂದಿಗಳಿಗೆ ಪ್ರತಿ ಮಾಹೆ ತಪ್ಪದೇ ವೇತನ ನೀಡಿರುವುದು ಸಹಕಾರ ಕ್ಷೇತ್ರದಲ್ಲಿ ಸಾರ್ವಜನಿಕರು ಇಟ್ಟಿರುವ ನಂಬಿಕೆಗೆ ಸಾಕ್ಷಿಯಾಗಿದೆ. ಈ ಸ್ಥಿರತೆಯನ್ನು ಅರಿತ ಕೇಂದ್ರ ಸರಕಾರ ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪಿಸಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪರ್ವಕಾಲವಾಗಿರುತ್ತದೆ.

ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಆರ್ಥಿಕ ಶಿಸ್ತು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಆರ್ಥಿಕ ಶಿಸ್ತು ಸಹಕಾರಿ ಸಂಸ್ಥೆಯ ಅಭಿವೃದ್ಧಿಯ ಕನ್ನಡಿ. ಅನಗತ್ಯ ವೆಚ್ಚಗಳನ್ನು ಮಾಡದೇ, ಅಗತ್ಯ ವೆಚ್ಚಗಳನ್ನು ಹಿಡಿತದಲ್ಲಿಟ್ಟುಕೊಂಡು, ಆದಾಯ ಸೋರಿಕೆಯ ತಡೆಗಟ್ಟುವಿಕೆಗೆ ಕೈಗೊಂಡ ಕ್ರಮಗಳನ್ನು ನಿರ್ದೇಶಕ ಮಂಡಳಿಯ ಪ್ರತಿ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಲೆಕ್ಕ ಪರಿಶೋಧನೆ ಹಾಗೂ ಲೆಕ್ಕ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದ ದಾಖಲೆಗಳ ನಿರ್ವಹಣೆಯನ್ನು ಅತ್ಯಂತ ಪಾರದರ್ಶಕವಾಗಿರಿಸಿ, ಸದಸ್ಯರಿಗೆ ತ್ವರಿತಗತಿಯಲ್ಲಿ ಅತ್ಯುತ್ತಮ ಸೇವೆ ನೀಡುತ್ತಿರುವುದು ನಮ್ಮ ಸಂಘದ ಯಶಸ್ಸಿಗೆ ಕಾರಣವಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಆಶ್ರಯದಲ್ಲಿ ನಡೆದ 2025ರ ಸಹಕಾರ ಸಪ್ತಾಹದಲ್ಲಿ ನಮ್ಮ ಸಂಘಕ್ಕೆ "ಉತ್ತಮ ಸಹಕಾರ ಸಂಘ ಪ್ರಶಸ್ತಿ ದೊರಕಿರುವುದು ನಮ್ಮ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

ಸಹಕಾರ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಸನ್ನದು ಲೆಕ್ಕ ಪರಿಶೋಧಕರಿಂದಲೇ ಆಂತರಿಕ ಲೆಕ್ಕ ಪರಿಶೋಧನೆ, ಹಿರಿಯ ಅನುಭವಿ ಲೆಕ್ಕ ಪರಿಶೋಧಕರುಗಳಿಂದ ಶಾಸನಬದ್ಧ ಲೆಕ್ಕ ಪರಿಶೋದನೆ ನಡೆಸುತ್ತಿರುವುದು ನಮ್ಮ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ನಿರ್ದೇಶಕ ಮಂಡಳಿ ಚುನಾವಣಾ ನೀತಿ ಸಂಹಿತೆಯ ಕಾರಣ ಈ ಬಾರಿಯ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲು ಸಾಧ್ಯವಾಗದಿರುವುದು ನಮಗೆ ಬೇಸರ ತಂದಿದ್ದರೂ ನಿಯಮ ಪಾಲನೆ ಅಗತ್ಯವಾಗಿತ್ತು. ಸಾರ್ವಜನಿಕರ ಉಪಯೋಗಕ್ಕಾಗಿ ಸಂಘವು ಪ್ರಾರಂಭಿಸಿರುವ "ಆಧಾರ-ನಿರಂತರ" ಅಭಿಯಾನ ಸರ್ವತ್ರ ಪ್ರಶಂಸೆಗೆ ಪಾತ್ರವಾಗಿದ್ದು, ಪ್ರತಿ ಮಾಹೆಯ ಪ್ರಥಮ ವಾರ ಸಂಘದ ಪ್ರಧಾನ ಕಚೇರಿಯಲ್ಲಿ ನಡೆಯುತ್ತಿದೆ. ಈ ಬಗ್ಗೆ ಸಹಕರಿಸಿದ ಉಡುಪಿ ಅಂಚೆ ವಿಭಾಗಕ್ಕೆ ನಮ್ಮ ಪ್ರೀತಿಪೂರ್ವಕ ಕೃತಜ್ಞತೆಗಳು.

ಸಂಘದ ದೈನಂದಿನ ವ್ಯವಹಾರಗಳಲ್ಲಿ ಸದಸ್ಯರ ಭಾಗವಹಿಸುವಿಕೆ ಸಂಘದ ಅಭಿವೃದ್ಧಿಗೆ ಪೂರಕ ಎಂಬುದು ನಮ್ಮ ನಂಬಿಕೆ. ಸಹೃದಯಿ ಸದಸ್ಯರೆಲ್ಲರೂ ತಮ್ಮ ಹಣಕಾಸು ವ್ಯವಹಾರಗಳನ್ನು ಸಂಘದಲ್ಲಿಯೇ ನಡೆಸಿ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ. ನನ್ನ ಅಧ್ಯಕ್ಷತೆಯಲ್ಲಿ, ನೂತನ ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿಗಳ ಸಹಕಾರದೊಂದಿಗೆ ಹಲವಾರು ಅಭಿವೃದ್ಧಿಪರ ಯೋಜನೆ ಹಾಗೂ ಯೋಚನೆಗಳನ್ನು, ಕಾರ್ಯರೂಪಕ್ಕೆ ತರಲು ತಮ್ಮೆಲ್ಲರ ಸಲಹೆ, ಸಹಕಾರ ಹಾಗೂ ಸಹಾಯವನ್ನು ಕೋರುತ್ತಾ ಸಂಘದ 106 ನೇ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತೇನೆ.

**ಶುಭಾಶಯಗಳೊಂದಿಗೆ**

**ಶ್ರೀ ಜಿ. ವೆಂಕಟೇಶ ಶೆಣೈ**
(ಅಧ್ಯಕ್ಷರು)

# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

**ಪಾಲು ಬಂಡವಾಳ**




**ಠೇವಣಿಗಳು**




**ಸಾಲಗಳು**



# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

## ದುಡಿಯುವ ಬಂಡವಾಳ




## ನಿವ್ವಳ ಲಾಭ




## ನಿಧಿಗಳು



## GANGULI TOWN SOUHARDA CO-OP. SOCIETY LTD.

| | | |
|---|---|---|
| ನೋಂದಾಯಿತ ಕಚೇರಿ ಮತ್ತು ಗಂಗೊಳ್ಳಿ ಶಾಖೆ | : | ಕಟ್ಟಡ ಸಂಖ್ಯೆ-5-215<br>ರಥಬೀದಿ ಸಮೀಪ, ಮುಖ್ಯ ರಸ್ತೆ,<br>ಗಂಗೊಳ್ಳಿ-576 216<br>ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |
| ದೂರವಾಣಿ | : | ಪ್ರಧಾನ ಕಛೇರಿ : 08254-265459, 8147355476, 77<br>ಮುಖ್ಯ ಕಾರ್ಯನಿರ್ವಾಹಕ : 9449226587 |
| ನೋಂದಣಿ ಸಂಖ್ಯೆ | : | ಎ.ಆರ್. 38/ಸಂಪನ್ಮೂಲ/486/ಸೌ.ಕಾ./ ನೋಂದಣಿ/ 552/02-03 ದಿನಾಂಕ 17-02-2003<br>GST : 29AAAAG2286M1ZB<br>PAN : AAAAG2286M<br>TAN : BLRG03478G |
| ಕಾರ್ಯಕ್ಷೇತ್ರ | : | ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹೈಕಾಡಿ ಗ್ರಾಮವನ್ನು ಹೊರತುಪಡಿಸಿ ಉಡುಪಿ ಜಿಲ್ಲಾ ವ್ಯಾಪ್ತಿ |
| ಕೋಟೇಶ್ವರ ಶಾಖೆ | : | ಶಿವಾನಂದ ಕಾಂಪ್ಲೆಕ್ಸ್, ರಥ ಬೀದಿ,<br>ಮುಖ್ಯ ರಸ್ತೆ, ಕೋಟೇಶ್ವರ- 576 222<br>ದೂರವಾಣಿ : 08254-263459, 8147355475 |
| ಉಪ್ಪುಂದ ಶಾಖೆ | : | ಆರ್ನವಿ ಕಾಂಪ್ಲೆಕ್ಸ್, ಶಂಕರ ಕಲಾ ಮಂದಿರ ಸಮೀಪ,<br>ರಾಷ್ಟ್ರೀಯ ಹೆದ್ದಾರಿ-66, ಉಪ್ಪುಂದ - 576 232<br>ದೂರವಾಣಿ : 08254-256449, 8147355474 |
| ಲೆಕ್ಕ ಪರಿಶೋಧಕರು | : | ಕಾಮತ್ & ಕೋ<br>ಲೆಕ್ಕಪರಿಶೋಧಕರು,<br>ಮೊದಲನೇ ಮಹಡಿ, 'ದಿ ಮಿರೇಜ್'<br>ಉಡುಪಿ ಮಣಿಪಾಲ ಹೆದ್ದಾರಿ, ಕುಂಜಿಬೆಟ್ಟು, ಉಡುಪಿ<br>ದೂರವಾಣಿ : 9341862528 |
| ಆಂತರಿಕ ಲೆಕ್ಕ ಪರಿಶೋಧಕರು | : | ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೊ<br>ಲೆಕ್ಕಪರಿಶೋಧಕರು<br>ಅಂಬಲಪಾಡಿ, ಉಡುಪಿ 576 103<br>ದೂರವಾಣಿ : 7353589371, 8792049371 |

# 106 ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

**ಸಂಘದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು 20-09-2026 ನೇ ಆದಿತ್ಯವಾರ ಪೂರ್ವಾಹ್ನ 10-30 ಕ್ಕೆ ಗಂಗೊಳ್ಳಿಯ ಶ್ರೀ ವಿಠಲ ರಖುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ನಡೆಯಲಿದ್ದು, ಸದಸ್ಯರು ಹಾಜರಿರುವಂತೆ ಕೋರಲಾಗಿದೆ.**

## ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

1. 106ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
2. 07-09-2025 ರಂದು ನಡೆದ 105ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.
3. 2025-26ನೇ ಸಾಲಿನ ನಿರ್ದೇಶಕ ಮಂಡಳಿ ವರದಿಯ ಅನುಮೋದನೆ.
4. 2025-26ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.
5. 2025-26ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.
6. 2025-26ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.
7. 2026-27ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.
8. 2025-26ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.
9. 2026-27ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
10. 2027-28ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
11. ಗಣಕೀಕೃತ ವ್ಯವಸ್ಥೆಯ ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
12. 2026-27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.
13. ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.
14. ಸಂಘದ ನೂತನ ಲೆಕ್ಕಪತ್ರ ನೀತಿಗಳ ಅನುಮೋದನೆ.
15. ಸಂಘದ ನೂತನ ಶಾಖೆಗಳನ್ನು ತೆರೆಯಲು ಅನುಮತಿ.
16. ಅನಿರೀಕ್ಷಿತವಾಗಿ ಹಿಂದಿನ ಸಾಲಿನ ಆದಾಯ ತೆರಿಗೆ ಪಾವತಿ ಬಾಧ್ಯತೆ ಬಂದಲ್ಲಿ ಕಾರ್ಯಚರಣೆ ಮೀಸಲು ನಿಧಿಯನ್ನು ಬಳಸಲು ಅನುಮತಿ.
17. 101ನೇ ಸಾಮಾನ್ಯ ಸಭೆಯಲ್ಲಿ ಅಂಗೀಕೃತವಾದ ಹೂಡಿಕೆ ನಿಯಮಗಳಲ್ಲಿ ಹೂಡಿಕೆ ಮಿತಿಯನ್ನು ಹೆಚ್ಚಿಸುವ ಕುರಿತು.
18. ಸಂಘದ ಮೀಸಲು ನಿಧಿಯನ್ನು ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕಿನ ರಿಸರ್ವ ಫಂಡ್ ಖಾತೆಯಲ್ಲಿ ಹೂಡಿಕೆ ಮಾಡಲು ಅನುಮತಿ.
19. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.

/ ಆಡಳಿತ ಮಂಡಳಿಯ ಅನುಮತಿ ಮೇರೆಗೆ /

ಸ್ಥಳ : ಗಂಗೊಳ್ಳಿ
ತಾ. : 03-09-2026

ಸಹಿ/-
ಮುಖ್ಯ ಕಾರ್ಯನಿರ್ವಾಹಕ

## ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಕುರಿತು ಟಿಪ್ಪಣಿ

**01 :– 106ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**

**ಟಿಪ್ಪಣಿ :–** ಸಂಘದ "ಅ" ವರ್ಗದ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾದ ಸೂಚನಾ ಪತ್ರವನ್ನು ಓದಿ ಅಂಗೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು.

**02 :–07–09–2025 ರಂದು ನಡೆದ 105ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**

**ಟಿಪ್ಪಣಿ :–** 105ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಸ್ವೀಕರಿಸಿ ಧೃಡೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು.

**03 :– 2025–26ನೇ ಸಾಲಿನ ನಿರ್ದೇಶಕ ಮಂಡಳಿ ವರದಿಯ ಅನುಮೋದನೆ.**

**ಟಿಪ್ಪಣಿ :–** ನಿರ್ದೇಶಕ ಮಂಡಳಿಯ ಸಂಕ್ಷಿಪ್ತ ವರದಿಯ ಅನುಮೋದನೆ.

**04 :– 2025–26ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**

**ಟಿಪ್ಪಣಿ :–** ಸನ್ನದು ಲೆಕ್ಕ ಪರಿಶೋಧಕರಾದ ಮೆಸರ್ಸ್ ಕಾಮತ್ ಎಂಡ್ ಕೋ ಉಡುಪಿ ಇವರು ನೀಡಿದ ಲೆಕ್ಕ ಪರಿಶೊಧನಾ ವರದಿ ಹಾಗೂ ದಿನಾಂಕ 11–08–2026 ರ ನಿರ್ದೇಶಕ ಮಂಡಳಿ ಸಭೆಯಲ್ಲಿ ತಯಾರಿಸಲಾದ ಅನುಪಾಲನಾ ವರದಿಯ ಅನುಮೋದನೆ.

**05 :– 2025–26ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**

**ಟಿಪ್ಪಣಿ :–** ನಿವ್ವಳ ಲಾಭ ರೂ 1,42,72,616.77 ನ್ನು ಉಪವಿಧಿಗನುಸಾರ ವಿಂಗಡಿಸುವ ಕುರಿತು.

**06 :– 2025–26ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.**

**ಟಿಪ್ಪಣಿ :–** ವರದಿ ಸಾಲಿನಲ್ಲಿ ಅಂದಾಜು ಮೀರಿದ 2 ಖರ್ಚುಗಳ ಒಟ್ಟು ರೂ 18,15,638 ರ ಅನುಮೋದನೆ.

**07 :– 2026–27ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**

**ಟಿಪ್ಪಣಿ :–** 2 ಕೋಟಿ ನಿವ್ವಳ ಲಾಭ ಹೊಂದಿರುವ 2026–27 ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವ ಬಗ್ಗೆ ನಿರ್ಣಯ.

**08 :– 2025–26ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**

**ಟಿಪ್ಪಣಿ :–** 2025–26 ನೇ ಸಾಲಿನಲ್ಲಿ 268 ಅ ವರ್ಗದ ಸದಸ್ಯರು, 3 ಬಿ ವರ್ಗದ ಸದಸ್ಯರು ಸೇರ್ಪಡೆಯಾಗಿದ್ದು, 45 ಅ ವರ್ಗದ ಹಾಗೂ 29 ಬಿ ವರ್ಗದ ಸದಸ್ಯರು ಸದಸ್ಯತ್ವವನ್ನು ತ್ಯಜಿಸಿದ್ದು ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

**09 :– 2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ :–** ಉಡುಪಿಯ ಮೆಸರ್ಸ್ ಕಾಮತ್ & ಕೋ ಇವರ ನೇಮಕಾತಿಗೆ ನಿರ್ದೇಶಕ ಮಂಡಳಿ ಶಿಫಾರಸ್ಸು ಮಾಡಿದ್ದು ಈ ಬಗ್ಗೆ ನಿರ್ಣಯ ಕೈಗೊಳ್ಳುವುದು.

**10 :– 2027–28ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ :–** CA ಭಾರತೀಶ್ ನಾಯಕ್ ಟಿ. ಕುಂದಾಪುರ ಇವರನ್ನು ನೇಮಕಾತಿ ಮಾಡಲು ನಿರ್ದೇಶಕ ಮಂಡಳಿಯು ಶಿಫಾರಸು ಮಾಡಿದ್ದು ಈ ಬಗ್ಗೆ ನಿರ್ಣಯ ಕೈಗೊಳ್ಳುವುದು.

**11 :–ಗಣಕೀಕೃತ ವ್ಯವಸ್ಥೆಯ ಲೆಕ್ಕಪರಿಶೋಧಕರ (System Auditor) ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ :–** CA ಶ್ರೀ ನಂದನ್ ರಾವ್, ಲೆಕ್ಕ ಪರಿಶೋಧಕರು ಸುರತ್ಕಲ್ ಇವರನ್ನು ನೇಮಕಾತಿ ಮಾಡಲು ನಿರ್ದೇಶಕ ಮಂಡಳಿಯು ಶಿಫಾರಸು ಮಾಡಿದ್ದು ಈ ಬಗ್ಗೆ ನಿರ್ಣಯ ಕೈಗೊಳ್ಳುವುದು.

**12 :–2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ಟಿಪ್ಪಣಿ :–** ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ ನಿರ್ಣಯ.

**13 :– ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

**ಟಿಪ್ಪಣಿ :–** ವರದಿ ಸಾಲಿನಲ್ಲಿ ಶಿಕ್ಷಣ ನಿಧಿಗೆ ರೂ. 2,28,531 ಪಾವತಿ ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ರೂ 2,30,785/– ನ್ನು ವ್ಯಯಿಸಲಾಗಿದ್ದು ಇವುಗಳ ಅನುಮೋದನೆ.

**14 :– ಸಂಘದ ನೂತನ ಲೆಕ್ಕಪತ್ರ ನೀತಿಗಳ (Accounting Policies) ಅನುಮೋದನೆ.**

**ಟಿಪ್ಪಣಿ :–** 7 ಪುಟಗಳ ಲೆಕ್ಕ ಪತ್ರ ನೀತಿಗಳನ್ನು ನಿರ್ದೇಶಕ ಮಂಡಳಿಯು ತಯಾರಿಸಿದ್ದು ಸದ್ರಿ ನೀತಿಯ ಅನುಮೋದನೆ.

**15 :– ಸಂಘದ ನೂತನ ಶಾಖೆಗಳನ್ನು ತೆರೆಯಲು ಅನುಮತಿ.**

**ಟಿಪ್ಪಣಿ :–** ಕಾರ್ಯವ್ಯಾಪ್ತಿಯ ಮರವಂತೆ, ಸಿದ್ಧಾಪುರ, ಸಾಸ್ತಾನ ಹಾಗೂ ಮಲ್ಪೆಯಲ್ಲಿ ಸಂಘದ ನೂತನ ಶಾಖೆಗಳನ್ನು ತೆರೆಯಲು ಅನುಮತಿ.

**16 :– ಅನಿರೀಕ್ಷಿತವಾಗಿ ಹಿಂದಿನ ಸಾಲಿನ ಆದಾಯ ತೆರಿಗೆ ಪಾವತಿ ಬಾಧ್ಯತೆ ಬಂದಲ್ಲಿ ಕಾರ್ಯಚರಣೆ ಮೀಸಲು ನಿಧಿಯನ್ನು ಬಳಸಲು ಅನುಮತಿ.**

**ಟಿಪ್ಪಣಿ :–** ಆದಾಯ ತೆರಿಗೆ ಪಾವತಿ ಮಾಡುವಂತೆ ಕೆಲವು ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ಇಲಾಖೆಯ ಸೂಚನಾ ಪತ್ರಗಳು ಬರುತ್ತಿದ್ದು ಮುಂಜಾಗ್ರತಾ ಕ್ರಮವಾಗಿ ಅಗತ್ಯವೆನಿಸಿದರೆ ಕಾರ್ಯಚರಣಾ ಮೀಸಲು ನಿಧಿಯನ್ನು ಬಳಸಲು ಸಭೆಯ ಅನುಮತಿ ಪಡೆಯುವ ಕುರಿತು.

**17 :– 101ನೇ ಸಾಮಾನ್ಯ ಸಭೆಯಲ್ಲಿ ಅಂಗೀಕೃತವಾದ ಹೂಡಿಕೆ ನಿಯಮಗಳಲ್ಲಿ ಹೂಡಿಕೆ ಮಿತಿಯನ್ನು ಹೆಚ್ಚಿಸುವ ಕುರಿತು.**

**ಟಿಪ್ಪಣಿ :–** ಹೂಡಿಕೆ ನಿಯಮಗಳಲ್ಲಿ ಬ್ಯಾಂಕೊಂದರಲ್ಲಿ ಹೂಡಬಹುದಾದ ಗರಿಷ್ಟ ಮೊತ್ತವನ್ನು ಈಗಿರುವ 5 ಕೋಟಿಯಿಂದ 10 ಕೋಟಿಗೆ ಹೆಚ್ಚಿಸುವ ಕುರಿತು.

**18 :– ಸಂಘದ ಮೀಸಲು ನಿಧಿಯನ್ನು ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕಿನ ರಿಸರ್ವ ಫಂಡ್ ಖಾತೆಯಲ್ಲಿ ಹೂಡಿಕೆ ಮಾಡಲು ಅನುಮತಿ.**

**ಟಿಪ್ಪಣಿ :–** ಟೀಚರ್ಸ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ರಿಸರ್ವ ಫಂಡ್ ಖಾತೆ ತೆರೆಯುವ ಕುರಿತು.

**19 :– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.**

**ಟಿಪ್ಪಣಿ :–** ಸಾಮಾನ್ಯ ಸಭೆಯ ಕಾರ್ಯ ವ್ಯಾಪ್ತಿಯೊಳಗೆ ಬರಬಹುದಾದ ಇತರ ವಿಷಯಗಳ ಕುರಿತು ಪರಿಶೀಲನೆ ಮತ್ತು ನಿರ್ಣಯ.

## ದಯವಿಟ್ಟು ಗಮನಿಸಿ

1. **ಸಾಮಾನ್ಯ ಸಭೆಯ ಹಾಜರಿ ನೋಂದಣಿ ಸಮಯ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಇರುವುದು.**

2. 09/09/2018 ರ ಸಾಮಾನ್ಯ ಸಭೆಯು ನಿರ್ಣಯ ನಂಬ್ರ 13 ರಂತೆ ಸಾಮಾನ್ಯ ಸಭೆ ನಡೆಸುವ ರೀತಿ– ನೀತಿ ಹಾಗೂ ನಡಾವಳಿಗಳನ್ನು ಅಂಗೀಕರಿಸಿದ್ದು ಸದ್ರಿ ನಿಯಮಾವಳಿಗಳಂತೆ ಸಭೆಯು ನಡೆಯಲಿದೆ. ಸಭೆ ನಿಗದಿತ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಿ ಯಶಸ್ವಿಯಾಗಿ ನಡೆಸಲು ಸರ್ವ ಸದಸ್ಯರ ಸಹಕಾರವನ್ನು ಕೋರಲಾಗಿದೆ. (ಸದ್ರಿ ನಿಯಮಾವಳಿಗಳನ್ನು ಈ ಪುಸ್ತಕದ ಪುಟ ಸಂಖ್ಯೆ 5 ಮತ್ತು 6 ರಲ್ಲಿ ಮುದ್ರಿಸಲಾಗಿದೆ.)

3. ಸದಸ್ಯರ ಹಕ್ಕು ಚಲಾಯಿಸಲು ಅವಶ್ಯಕತೆಗಳು :

   ಸದಸ್ಯರ ಹಕ್ಕು ಚಲಾಯಿಸಲು ಉಪವಿಧಿಯಲ್ಲಿ ನಿಗದಿ ಪಡಿಸಿದ ಕನಿಷ್ಠ ವ್ಯವಹಾರ ಮಾಡುವುದು ಹಾಗೂ ಸಾಮಾನ್ಯ ಸಭೆಗೆ ಹಾಜರಾಗುವುದು ಅಗತ್ಯ.

   ಉಪವಿಧಿ ಪ್ರಕಾರ ಹಿಂದಿನ ಐದು ಸಾಮಾನ್ಯ ಸಭೆಗಳ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಬೇಕು.

   ಹಾಗೂ

   ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ 2 ಸಹಕಾರಿ ವರ್ಷಗಳಲ್ಲಿ ಸದಸ್ಯನು ಸಂಘದ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ (ಪಿಗ್ಮಿ ಹೊರತುಪಡಿಸಿ) ಕನಿಷ್ಠ ರೂ. 10,000.00ವನ್ನು ಒಂದು ವರ್ಷವಾದರೂ ತೊಡಗಿಸಿರಬೇಕು. ಇಂತಹ ಠೇವಣಿಯನ್ನು ಸಂಘದ ಸಾಮಾನ್ಯ ಸಭೆಯ ದಿನಾಂಕದ ಅಥವಾ ಚುನಾವಣೆಯ ದಿನಾಂಕದ 365 ದಿನಗಳ ಮೊದಲು ತೊಡಗಿಸಿರಬೇಕು.

   ಅಥವಾ

   ಕನಿಷ್ಠ ರೂ. 10,000/– (ರೂಪಾಯಿ ಹತ್ತು ಸಾವಿರ ಮಾತ್ರ) ಸಾಲ ಮಾಡಿ ಸುಸ್ತಿಯಾಗುವ ಮೊದಲೇ ಬಡ್ಡಿ ಸಮೇತ ತೀರುವಳಿ ಮಾಡಿರಬೇಕು ಹಾಗೂ ಸಾಲದ ಖಾತೆ ಮುಕ್ತಾಯವಾಗದಿದ್ದಲ್ಲಿ ಸಾಲ ಮರುಪಾವತಿ ಕ್ರಮಬದ್ಧವಾಗಿರಬೇಕು. ಸಾಲವನ್ನು ಸಂಘದ ಸಾಮಾನ್ಯ ಸಭೆಯ ದಿನಾಂಕದ ಅಥವಾ ಚುನಾವಣೆಯ ದಿನಾಂಕದ 365 ದಿನಗಳ ಮೊದಲು ಪಡೆದಿರಬೇಕು.

   ಮೇಲೆ ವಿವರಿಸಿರುವ ಕನಿಷ್ಠ ವ್ಯವಹಾರ ಮಾಡದಿದ್ದಲ್ಲಿ ಹಾಗೂ ಹಿಂದಿನ ಐದು ಸಹಕಾರಿಯ ವರ್ಷಗಳಲ್ಲಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದಿದ್ದರೆ ಅಂತಹ ಸದಸ್ಯರು ಸಂಘದ ಮಹಾಸಭೆಯಲ್ಲಿ ಭಾಗವಹಿಸುವ, ಮತದಾನ ಮಾಡುವ ಮತ್ತು ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಮುಂದಿನ ಒಂದು ವರ್ಷದ ವರೆಗೆ ಕಳೆದುಕೊಳ್ಳುತ್ತಾರೆ.

## 09-09-2018 ರಂದು ನಡೆದ ಸಂಘದ 98 ನೇ ಸಾಮಾನ್ಯ ಸಭೆಯಲ್ಲಿ ನಿರ್ಣಯ ನಂಬ್ರ 13ರಂತೆ ಅಂಗೀಕೃತವಾದ ಸಾಮಾನ್ಯ ಸಭೆ ನಡೆಸುವ ಕುರಿತ ನೀತಿ ಹಾಗೂ ನಡಾವಳಿಗಳು

### ಭಾಗ - 1

1. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಂತೆ ಪ್ರತಿ ವರ್ಷ ಸಪ್ಟೆಂಬರ್ 25 ರೊಳಗೆ ಸಂಘದ ಸಾಮಾನ್ಯ ಸಭೆ ನಡೆಸತಕ್ಕದ್ದು.
2. ಸಾಮಾನ್ಯ ಸಭೆಗೆ 15 ಪೂರ್ಣ ದಿನಗಳ ನೋಟೀಸನ್ನು ಎಲ್ಲಾ ಅರ್ಹ ಸದಸ್ಯರಿಗೆ ನೀಡತಕ್ಕದ್ದು, ಯಾವುದೇ ಸಾಮಾನ್ಯ ಸಭೆಯಲ್ಲಿ ಉಪವಿಧಿಯ ತಿದ್ದುಪಡಿ ಇದ್ದಲ್ಲಿ 20 ಪೂರ್ಣ ದಿನಗಳ ನೋಟೀಸನ್ನು ಅರ್ಹ ಸದಸ್ಯರಿಗೆ ನೀಡತಕ್ಕದ್ದು.
3. ಸಾಮಾನ್ಯ ಸಭೆಯ ನೋಟೀಸನ್ನು ನಿಯಮಗಳಂತೆ ಕಳುಹಿಸತಕ್ಕದ್ದು.
4. ಸಾಮಾನ್ಯ ಸಭೆಯಲ್ಲಿ ಭಾಗವಹಿಸುವವರಿಗೆ ಸಂಘವು ನೀಡಿದ ಗುರುತಿನ ಚೀಟಿ ಕಡ್ಡಾಯ, ಗುರುತಿನ ಚೀಟಿ ಇಲ್ಲದ ಸದಸ್ಯರಿಗೆ ಸಭೆಯಲ್ಲಿ ಭಾಗವಹಿಸಲು ಅವಕಾಶವಿರತಕ್ಕದ್ದಲ್ಲ.
5. ಸಭೆಯಲ್ಲಿ ಸದಸ್ಯರು ಮಾತ್ರ ಭಾಗವಹಿಸತಕ್ಕದ್ದು, ಸದಸ್ಯರೊಂದಿಗೆ ಯಾವುದೇ ಜೊತೆಗಾರರಿದ್ದಲ್ಲಿ ಅಂತಹ ಜೊತೆಗಾರರಿಗೆ ಸಭೆಯಲ್ಲಿ ಭಾಗವಹಿಸುವ ಅವಕಾಶವಿರುವುದಿಲ್ಲ. ಸಾಮಾನ್ಯ ಸಭೆಯಲ್ಲಿ ಪ್ರೇಕ್ಷಕರಿಗೆ ಪ್ರವೇಶವಿರುವುದಿಲ್ಲ.
6. ಸಾಮಾನ್ಯ ಸಭೆಯ ನೋಟೀಸಿನ ಜೊತೆಗೆ ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳ ಟಿಪ್ಪಣಿಯನ್ನು ಸಹ ನೀಡತಕ್ಕದ್ದು.
7. ನೋಟೀಸಿನಲ್ಲಿ ನಮೂದಿಸಿದ ಸಮಯದಿಂದ ಒಂದು ಗಂಟೆಯವರೆಗೆ ಕೋರಂಗೆ ಅಗತ್ಯವಿರುವ ಸಂಖ್ಯೆಯ ಸದಸ್ಯರು ಹಾಜರಿರದಿದ್ದಲ್ಲಿ ಸಭೆಯನ್ನು ಮುಂದೂಡತಕ್ಕದ್ದು.
8. ಪ್ರಾರ್ಥನೆ, ಸ್ವಾಗತ, ಪರಿಚಯ ಮುಂತಾದ ಕಾರ್ಯಕ್ರಮಗಳ ನಂತರ ಸಾಮಾನ್ಯ ಸಭೆಯ ಕಾರ್ಯಕಲಾಪಗಳು ಅಧ್ಯಕ್ಷರ ಭಾಷಣದಿಂದ ಆರಂಭವಾಗತಕ್ಕದ್ದು.

### ಸಭೆಯಲ್ಲಿ ವಿಷಯ ಪ್ರಸ್ತಾವನೆ, ಪ್ರಶ್ನೆ ಕೇಳುವುದು ಇತ್ಯಾದಿ

### ಭಾಗ - 2

1. ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯದ ಕುರಿತು ನೀಡಲಾದ ಟಿಪ್ಪಣಿಗಳ ಬಗ್ಗೆ ವಾರ್ಷಿಕ ವರದಿ, ಮುಂಗಡ ಪತ್ರ, ಲೆಕ್ಕ ಪರಿಶೋಧನಾ ವರದಿ, ಕಾರ್ಯ ಯೋಜನೆ ಇತ್ಯಾದಿ ಯಾವುದೇ ವಿಷಯದ ಬಗ್ಗೆ ಪ್ರಶ್ನೆ, ಅನುಮಾನ, ಸಂದೇಹ, ಸಲಹೆಗಳಿದ್ದಲ್ಲಿ ಸಭೆಯ ದಿನಾಂಕದ 7 ದಿನ ಮೊದಲು ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆ ಬರೆದು ಕಳುಹಿಸತಕ್ಕದು. ಹಾಗೂ ಬರೆದು ಕಳುಹಿಸಲಾದ ಲಿಖಿತ ಪ್ರಶ್ನೆಗೆ ಸಭೆಯಲ್ಲಿ ಉತ್ತರಿಸತಕ್ಕದ್ದು. ಅಧ್ಯಕ್ಷರ ಉತ್ತರದ ನಂತರ ಪ್ರಶ್ನೆ ಕೇಳಿದ ಸದಸ್ಯರಿಗೆ ಒಂದು ಪೂರಕ ಪ್ರಶ್ನೆ ಕೇಳಲು ಮಾತ್ರ ಅವಕಾಶವಿರತಕ್ಕದ್ದು.

2. ಸಭೆಯ ನೋಟೀಸಿನಲ್ಲಿ ನಮೂದಿಸದ ಇನ್ನಾವುದೇ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆಯ ಅಗತ್ಯವಿದೆ ಎಂದು ಯಾವುದೇ ಸದಸ್ಯರು ಭಾವಿಸಿದ್ದಲ್ಲಿ ಅಂತಹ ವಿಷಯವನ್ನು ಸಭೆಯ ದಿನಾಂಕದ 7 ದಿನದ ಮೊದಲು ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ವಿವರವಾಗಿ ಬರೆದು ಕಳುಹಿಸಿದಲ್ಲಿ ಅಂತಹ ವಿಷಯವು ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲಾಗುವ ಇತರ ವಿಷಯಗಳಡಿ ಚರ್ಚೆಗೆ ಅರ್ಹವಾಗಿದೆ ಎಂದು ಭಾವಿಸಿದಲ್ಲಿ ಅಂತಹ ವಿಷಯದ ಬಗ್ಗೆ ಟಿಪ್ಪಣಿ ತಯಾರಿಸಿ ಸಭೆ ಪ್ರಾರಂಭವಾಗುವ ಮುನ್ನ ಎಲ್ಲಾ ಸದಸ್ಯರಿಗೂ ನೀಡತಕ್ಕದ್ದು, ಪ್ರಶ್ನೆ ಕೇಳಿದ ಸದಸ್ಯರಿಗೆ ವಿಷಯವನ್ನು ಮಂಡಿಸಲು ಅವಕಾಶ ನೀಡತಕ್ಕದ್ದು. ಅಂತಹ ವಿಷಯದ ಬಗ್ಗೆ ಒಂದು ಪೂರಕ ಪ್ರಶ್ನೆ ಕೇಳಲು ಮಾತ್ರ ಅವಕಾಶವಿರತಕ್ಕದ್ದು.

3. ಲಿಖಿತವಾಗಿ ವಿಷಯ ಚರ್ಚೆ ಮಾಡಲು ಕೋರಿ ಬರೆದವರ ಹೊರತು ಬೇರೆಯವರಿಗೆ ಸಭೆಯಲ್ಲಿ ಮಾತನಾಡಲು ಅವಕಾಶವಿರತಕ್ಕದಲ್ಲ.

4. ಸಾಮಾನ್ಯ ಸಭೆ ನಡೆಯುವ 7 ದಿನಗಳ ಒಳಗೆ ಸೌಹಾರ್ದ ಕಾಯ್ದೆ ಸಹಕಾರಿಗೆ ಸಂಬಂಧಿಸಿದ ಯಾವುದೇ ಮಹತ್ವಪೂರ್ಣ ಘಟನೆ ನಡೆದಿದ್ದರೆ ಅಂತಹ ವಿಷಯಗಳ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ಅಗತ್ಯವಿದೆಯೆಂದು ಯಾವುದೇ ಸದಸ್ಯರು ಭಾವಿಸಿದಲ್ಲಿ ಸಭೆಯ ಪ್ರಾರಂಭದ ಒಂದು ಗಂಟೆ ಮೊದಲು ಅಂತಹ ವಿಷಯವನ್ನು ಲಿಖಿತವಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಹಾಗೆ ಸಲ್ಲಿಸಿದ ವಿಷಯವು ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ ಅಂತಹ ವಿಷಯವನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದು ಅಥವಾ ಅಂತಹ ವಿಷಯಕ್ಕೆ ಸಭೆಯಲ್ಲಿ ಸೂಕ್ತ ವಿವರಣೆ ನೀಡತಕ್ಕದ್ದು.

5. ಸಾಮಾನ್ಯ ಸಭೆಯ ಆರಂಭಕ್ಕೆ ನೋಟೀಸಿನಲ್ಲಿ ಕಾಣಿಸಿದ ಒಂದೊಂದೇ ವಿಷಯಗಳ ಪ್ರಸ್ತಾವನೆಯನ್ನು ಮಾಡುತ್ತಾ ಟಿಪ್ಪಣಿಯಲ್ಲಿ ನೀಡಲಾದ ವಿವರಣೆಗಳನ್ನು ಸಭೆಯ ಮುಂದಿಡತಕ್ಕದ್ದು, ಪ್ರಸ್ತಾವಿಸಲಾದ ವಿಷಯಗಳ ಬಗ್ಗೆ ಯಾವುದೇ ಸದಸ್ಯ ಪ್ರಶ್ನೆ ಕೇಳಿದ್ದಲ್ಲಿ ಅದರ ಬಗ್ಗೆ ವಿವರಣೆಯನ್ನು ಸಹ ಸಭೆಯ ಮುಂದಿಡತಕ್ಕದ್ದು, ಪ್ರಶ್ನೆ ಕೇಳಿದ ಸದಸ್ಯನೇ ಸಭೆಯ ಎದುರು ಆತನು ಲಿಖಿತವಾಗಿ ಕೇಳಿದ ಪ್ರಶ್ನೆಯನ್ನಿಡುವುದು ಸೂಕ್ತ ಎಂದು ಅಧ್ಯಕ್ಷರು ಭಾವಿಸಿದಲ್ಲಿ ಅಂತಹ ಸದಸ್ಯನಿಗೆ ಪ್ರಶ್ನೆಯನ್ನು ಓದಲು ಅವಕಾಶ ನೀಡಬಹುದು.

6. ಸಭೆಯಲ್ಲಿ ಮಂಡಿಸಲಾದ ಎಲ್ಲಾ ವಿಷಯಗಳು ಮುಕ್ತಾಯಗೊಂಡ ನಂತರ ಅಧ್ಯಕ್ಷರು ಅಧೀಕೃತವಾಗಿ ಸಭೆ ಮುಕ್ತಾಯಗೊಂಡ ಘೋಷಣೆ ಮಾಡತಕ್ಕದ್ದು.

7. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರಿಗೂ ಹಾಜರಾತಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

# ದಿನಾಂಕ 24–10–2021ರಂದು ನಡೆದ ಸಂಘದ 101ನೇ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ಹೂಡಿಕೆ ನಿಯಮಗಳು

**ಆರಂಭ ಮತ್ತು ಜಾರಿ :** ಈ ನಿಯಮಗಳು ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿಯಮಿತ, ನಂಬ್ರ 552, ರಥಬೀದಿ ಸಮೀಪ, ಮುಖ್ಯ ರಸ್ತೆ, ಗಂಗೊಳ್ಳಿ–576216 ಇದರ ಹೂಡಿಕೆ ನಿಯಮಗಳು ಎಂದು ಕರೆಯಲ್ಪಡುತ್ತದೆ. ಈ ನಿಯಮಗಳು 2020–21 ನೇ ಸಾಲಿನ ಸಾಮಾನ್ಯ ಸಭೆಯ ಅನುಮೋದನೆ ಪಡೆದು ದಿನಾಂಕ 01–11–2021 ರಿಂದ ಜಾರಿಗೆ ಬಂದಿರುತ್ತದೆ.

**ಹೂಡಿಕೆ ಮಾಡಬಹುದಾದ ಸಂಸ್ಥೆಗಳು:** ಸಹಕಾರಿಯ ಹೆಚ್ಚುವರಿ ನಿಧಿಗಳನ್ನು ಹಾಗೂ ಹೂಡಿಕೆಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18 (ಬಿ) ರನ್ವಯ ಯಾವುದೇ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ಗಳಲ್ಲಿ ಹೂಡಬಹುದು ಅಥವಾ ಠೇವಣಿ ಮಾಡಬಹುದು. ಹೂಡಿಕೆಗಳನ್ನು ಸಹಕಾರಿಯ ಹೆಸರಿನಲ್ಲಿ ಮುಖ್ಯ ಕಾರ್ಯನಿರ್ವಾಹಕ ಹಾಗೂ ಆಡಳಿತ ಮಂಡಳಿಯು ಆಗಿಂದಾಗೆ ಸೂಚಿಸುವ ಸಹಕಾರಿಯ ಅಧಿಕಾರಿಗಳ ಜಂಟಿ ಸಹಿಯಲ್ಲಿ ಮಾಡತಕ್ಕದ್ದು.

ಹೂಡಿಕೆ ಮಾಡಬಹುದಾದ ಬ್ಯಾಂಕ್‌ಗಳನ್ನು ಆಡಳಿತ ಮಂಡಳಿಯು ಅಗತ್ಯವೆನಿಸಿದಾಗ ಆಗಿಂದಾಗೆ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧರಿಸತಕ್ಕದ್ದು.

**ಹೂಡಿಕೆ ಮಿತಿ:** ಪ್ರತಿಯೊಂದು ಸಹಕಾರಿ ಬ್ಯಾಂಕ್‌ನಲ್ಲಿ ಸಹಕಾರಿಯ ಒಟ್ಟು ಹೂಡಿಕೆಯ 25% ಅಥವಾ ರೂ. 5 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಹೂಡಿಕೆ ಮಾಡಬಹುದು. ಯಾವುದೇ ಸಂದರ್ಭದಲ್ಲಿಯೂ ಯಾವುದೇ ಬ್ಯಾಂಕ್‌ವೊಂದರಲ್ಲಿ ಗರಿಷ್ಠ ಹೂಡಿಕೆ ರೂ. 5 ಕೋಟಿಯನ್ನು ದಾಟತಕ್ಕದ್ದಲ್ಲ.

ಈ ನಿಯಮ ಜಾರಿಗೆ ಬರುವ ಮೊದಲು ಯಾವುದೇ ಬ್ಯಾಂಕ್‌ಗಳಲ್ಲಿ 5 ಕೋಟಿಗಿಂತ ಹೆಚ್ಚಿಗೆ ಮೊತ್ತ ಹೂಡಿಕೆಯಾಗಿದ್ದಲ್ಲಿ ಅವುಗಳ ಪಕ್ವತಾ ಅವಧಿಯು ಮುಗಿದಾಗ ಠೇವಣಿಯನ್ನು ನಗದೀಕರಿಸಿ ಒಟ್ಟು ಹೂಡಿಕೆ ಮೊತ್ತವು 5 ಕೋಟಿಯ ಮಿತಿ ದಾಟದಂತೆ ನೋಡಿಕೊಳ್ಳತಕ್ಕದ್ದು.

ಒಟ್ಟು ಹೂಡಿಕೆ ಎಂದರೆ ಹಿಂದಿನ ಹಣಕಾಸು ವರ್ಷಾಂತ್ಯದಲ್ಲಿರುವ ಹೂಡಿಕೆಯೆಂದು ಪರಿಗಣಿಸತಕ್ಕದ್ದು.

ಆಡಳಿತ ಮಂಡಳಿಯು ನಿಗದಿ ಪಡಿಸಿದ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡುವಾಗ ಗರಿಷ್ಠ ಬಡ್ಡಿ ದರವನ್ನು ನೀಡುವ ಬ್ಯಾಂಕ್‌ನಲ್ಲಿ ಮೊದಲು ಹೂಡಿಕೆಗಳನ್ನು ಮಾಡತಕ್ಕದ್ದು. ಉಳಿದ ಹೂಡಿಕೆಗಳನ್ನು ಬಡ್ಡಿ ದರದ ಇಳಿಕೆ ಕ್ರಮದಲ್ಲಿ ಇತರ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡತಕ್ಕದ್ದು.

**ಹೂಡಿಕೆ ಮೇಲಿನ ಸಾಲ ಅಥವಾ ನಗದುದ್ದರಿ ಸಾಲ (ಓವರ್ ಡ್ರಾಫ್ಟ್):** ತುರ್ತು ಅವಶ್ಯಕತೆ ಸಂದರ್ಭದಲ್ಲಿ ಹೂಡಿಕೆ ಮೇಲೆ ಅಗತ್ಯವೆನಿಸಿದಷ್ಟು ಮೊತ್ತವನ್ನು ಸಾಲವಾಗಿ ಅಥವಾ ನಗದುದ್ದರಿ ಅಥವಾ ಓವರ್‌ಡ್ರಾಫ್ಟ್ ಸಾಲವನ್ನು ಪಡೆಯಲು ಮುಖ್ಯ ಕಾರ್ಯನಿರ್ವಾಹಕರು ಅಧಿಕಾರ ಹೊಂದಿರತಕ್ಕದ್ದು.

**ಹೂಡಿಕೆಗೆ ಮಾನದಂಡ:** ಹೂಡಿಕೆಗೆ ಸಂಸ್ಥೆಯನ್ನು ಆಯ್ಕೆ ಮಾಡುವಾಗ ಆಡಳಿತ ಮಂಡಳಿಯು ಸಂಸ್ಥೆಯ ಆರ್ಥಿಕ ಸ್ಥಿತಿಗತಿಗಳನ್ನು ಸಮಗ್ರವಾಗಿ ಪರಿಶೀಲಿಸಿ ಸುರಕ್ಷಿತವೆನಿಸಬಹುದಾದ ಬ್ಯಾಂಕ್‌ಗಳನ್ನು ಮಾತ್ರ ಹೂಡಿಕೆಗೆ ಆಯ್ಕೆ ಮಾಡತಕ್ಕದ್ದು. ಈ ಬಗ್ಗೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

**ಹೂಡಿಕೆಗೆ ಮಾದರಿ :** ಎಲ್ಲಾ ಹೂಡಿಕೆಗಳನ್ನು ನಿರಖು ಠೇವಣಿ ರೂಪದಲ್ಲಿಯೇ ಇರಿಸತಕ್ಕದ್ದು, ಹೂಡಿಕೆಗಳಿಂದ ತ್ರೈಮಾಸಿಕ ಬಡ್ಡಿ ಆದಾಯ ಸಹಕಾರಿಯ ಬ್ಯಾಂಕ್ ಖಾತೆಗೆ ಜಮಾ ಆಗುವಂತೆ ನೋಡಿಕೊಳ್ಳತಕ್ಕದ್ದು.

**ಇತರೇ ವಿಷಯಗಳು :** ಮುಂದಿನ ದಿನಗಳಲ್ಲಿ ಹೂಡಿಕೆಗಳಲ್ಲಿ ಕಾನೂನು ರೀತ್ಯ ಯಾವುದೇ ಬದಲಾವಣೆಗಳಾದಲ್ಲಿ ಈ ಬಗ್ಗೆ ಸಂಸ್ಥೆಯ ಹಿತದೃಷ್ಟಿಯಿಂದ ಆಡಳಿತ ಮಂಡಳಿಯು ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಬದ್ಧವಾಗಿರತಕ್ಕದ್ದು.

ಈ ನಿಯಮಗಳು ಮತ್ತು ಸಹಕಾರಿಯ ಉಪವಿಧಿ, ಸೌಹಾರ್ದ ಸಹಕಾರಿ ಕಾಯ್ದೆ 1997 ರ ನಡುವೆ ಏನಾದರೂ ಸಂಘರ್ಷವುಂಟಾದಲ್ಲಿ ಸಹಕಾರಿಯ ಉಪವಿಧಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ / ನಿಯಮಗಳಲ್ಲಿನ ಅವಕಾಶಗಳದ್ದೆ ಮೇಲುಗೈಯಾಗುತ್ತದೆ.

ದಿನಾಂಕ 24–10–2021 ರಂದು ನಡೆದ ಸಹಕಾರಿಯ 101ನೇ ಸಾಮಾನ್ಯ ಸಭೆಯ ನಿರ್ಣಯ ನಂಬ್ರ–13ರಂತೆ ಮಂಜೂರಾದ ಹೂಡಿಕೆ ನಿಯಮಗಳು.

# ಸದಸ್ಯರ ಗಮನಕ್ಕೆ

1. ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯದ ಕುರಿತು ನೀಡಲಾದ ಟಿಪ್ಪಣಿಗಳ ಬಗ್ಗೆ, ವಾರ್ಷಿಕ ವರದಿ, ಮುಂಗಡ ಪತ್ರ, ಲೆಕ್ಕ ಪರಿಶೋಧನಾ ವರದಿ, ಕಾರ್ಯಯೋಜನೆ ಇತ್ಯಾದಿ ಸಭೆಯಲ್ಲಿ ಚರ್ಚಿಸಬಹುದಾದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ, ಸಂದೇಹ, ಅಸಮಾಧಾನ, ಅಥವಾ ಸಲಹೆಗಳಿದ್ದರೆ ದಿನಾಂಕ 12-09-2026 ನೇ ಶನಿವಾರ ಅಪರಾಹ್ನ 4 ಗಂಟೆಯೊಳಗೆ ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆ ಕಳುಹಿಸಬಹುದು. [2025-26ನೇ ಸಹಕಾರ ವರ್ಷಕ್ಕೆ ಸಂಬಂಧಿಸಿದ ವಿಷಯಗಳು ಮಾತ್ರ]

2. ಸಭೆ ನಡೆಯುವಾಗ ದಯವಿಟ್ಟು ಕಾರ್ಯಸೂಚಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಕೇಳಿ. ಇತರ ವಿಷಯಗಳ ಬಗ್ಗೆ ಸಭೆಯ ಕೊನೆಯಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು.

3. 2022-23ನೇ ಸಾಲಿನ ಪಾಲು ಮುನಾಫೆಯನ್ನು ಇದುವರೆಗೆ ಪಡೆಯದಿರುವ ಸದಸ್ಯರು ದಿನಾಂಕ 30-09-2026 ರೊಳಗೆ ಪಡೆದುಕೊಳ್ಳಬೇಕಾಗಿ ವಿನಂತಿ. ಪಡೆಯದಿದ್ದಲ್ಲಿ ಆ ಮೊತ್ತವನ್ನು ದಿನಾಂಕ 05-10-2026 ರಂದು ಯಾ ಸಂಘಕ್ಕೆ ಸೂಕ್ತವೆನಿಸಿದ ಮುಂದಿನ ದಿನಗಳಲ್ಲಿ ಸಂಘದ ಕ್ಷೇಮ ನಿಧಿಗೆ ಜಮಾ ಮಾಡಲಾಗುವುದು. ಈ ಬಗ್ಗೆ ಪ್ರತ್ಯೇಕ ಸೂಚನಾ ಪತ್ರವನ್ನು ಯಾ ಮಾಹಿತಿಯನ್ನು ನೀಡಲಾಗುವುದಿಲ್ಲ. ಹಾಗೂ ಒಮ್ಮೆ ಕ್ಷೇಮ ನಿಧಿಗೆ ಜಮಾ ಮಾಡಲಾದ ಪಾಲು ಮುನಾಫೆಯನ್ನು ಮತ್ತೆ ಸದಸ್ಯರಿಗೆ ಪಾವತಿಸಲು ಸಾಧ್ಯವಾಗುವುದಿಲ್ಲ.

4. ಕಳೆದ 7 ವರ್ಷಗಳಿಂದೀಚೆಗೆ ಸದಸ್ಯರಾದ ಬಹುತೇಕ ಸದಸ್ಯರ ಪಾಲು ಪ್ರಮಾಣ ಪತ್ರ (ಷೇರ್ ಸರ್ಟಿಫಿಕೇಟ್) ಸಂಘದ ಪ್ರಧಾನ ಕಚೇರಿಯಲ್ಲಿದ್ದು ಸದಸ್ಯರು ಪಡೆದುಕೊಳ್ಳಬೇಕಾಗಿ ವಿನಂತಿ. ನೋಂದಾಯಿತ ಅಂಚೆ ಮೂಲಕ ಕಳುಹಿಸಲು ಅಂಚೆ ವೆಚ್ಚ ದುಬಾರಿಯಾಗುವುದರಿಂದ ತಾವೇ ಪ್ರಧಾನ ಕಚೇರಿಗೆ ಅಥವಾ ಶಾಖೆಗೆ ಭೇಟಿ ನೀಡಿ ಪಡೆದುಕೊಳ್ಳಬೇಕಾಗಿ ವಿನಂತಿ.

5. ಸದಸ್ಯರ ಎಲ್ಲಾ ವ್ಯವಹಾರಗಳಿಗೆ ಉಚಿತ WhatsApp ಸಂದೇಶ ಸೌಲಭ್ಯವಿದ್ದು ಸದಸ್ಯರು ತಮ್ಮ WhatsApp ಮೊಬೈಲ್ ಸಂಖ್ಯೆಯನ್ನು ನೀಡಿ ಸಹಕರಿಸಬೇಕು. ಈಗಾಗಲೇ ನೀಡಲಾದ ನಿಮ್ಮ ಮೊಬೈಲ್ ಸಂಖ್ಯೆಯಲ್ಲಿ ಬದಲಾವಣೆಯಿದ್ದಲ್ಲಿ ನೂತನ ಸಂಖ್ಯೆಯನ್ನು ಸಂಘಕ್ಕೆ ನೀಡಬೇಕಾಗಿ ವಿನಂತಿ.

## 07-09-2025 ನೇ ಆದಿತ್ಯವಾರ ನಡೆದ
## ಸಂಘದ 105 ನೇ ಸಾಮಾನ್ಯ ಸಭೆಯ ನಡಾವಳಿಗಳು

ಸಂಘದ 105 ನೇ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಜಿ. ವೆಂಕಟೇಶ್ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ದಿನಾಂಕ 07 ಸಪ್ಟೆಂಬರ್ 2025 ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 10.40 ಕ್ಕೆ ಸರಿಯಾಗಿ ಗಂಗೊಳ್ಳಿಯ ಶ್ರೀ ವಿಠಲ ರಕುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಜರಗಿತು. ಸಭೆಯಲ್ಲಿ ಒಟ್ಟು 527 ಸದಸ್ಯರು ಭಾಗವಹಿಸಿದ್ದರು. ಕಿರಿಯ ಸಹಾಯಕಿ ಶ್ರೀಮತಿ ಪ್ರತೀಕ್ಷಾ ಪ್ರಾರ್ಥಿಸಿದರು. ಸಂಘದ ನಿರ್ದೇಶಕರಾದ ಶ್ರೀ ಎಸ್. ವೆಂಕಟರಮಣ ಆಚಾರ್ಯ ಆಗಮಿಸಿದ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕ ಶ್ರೀ ಗಣೇಶ್ ನಾಯಕ್ ನಿರೂಪಿಸಿದ ಕಾರ್ಯಕ್ರಮದಲ್ಲಿ ನಿರ್ದೇಶಕ ಶ್ರೀ ಕೆ. ಪರಮೇಶ್ವರ ನಾಯಕ್ ನುಡಿ ನಮನ ಸಲ್ಲಿಸಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭೆ ಆರಂಭವಾಯಿತು.

**ಸಭೆಯಲ್ಲಿ ಈ ಕೆಳಗಿನ ಸರ್ವಾನುಮತದ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ 1 :– 105 ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**

**ನಿರ್ಣಯ :–** 105 ನೇ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಸಾಮಾನ್ಯ ಸಭೆಯ 40 ಪುಟಗಳುಳ್ಳ ಒಟ್ಟು 3987 ನೋಟೀಸನ್ನು ಎಲ್ಲಾ "ಅ" ವರ್ಗದ ಸದಸ್ಯರಿಗೆ (ದಿನಾಂಕ 21/08/2025 ರಂದು 2000 ಹಾಗೂ ದಿನಾಂಕ 22/08/2025 ರಂದು 1987) ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಬಹು ಪ್ರಮಾಣದ ಅಂಚೆ ಮೂಲಕ ಕಳುಹಿಸಲಾಗಿದ್ದು, ತಾ 24/08/2025 ನೇ ಆದಿತ್ಯವಾರದ ವಿಜಯವಾಣಿ ದಿನ ಪತ್ರಿಕೆಯ ಮಂಗಳೂರು ಆವೃತ್ತಿಯ ಪುಟ ಸಂಖ್ಯೆ 2 ರಲ್ಲಿ ಸಾಮಾನ್ಯ ಸಭೆಯ ಬಗ್ಗೆ ಪ್ರಕಟಣೆ ನೀಡಲಾಗಿದ್ದು, ದಿನಾಂಕ 23-08-2025 ರಂದು ಸಹಕಾರಿಯ ವೆಬ್ ಸೈಟ್‌ನಲ್ಲಿಯೂ ಸಾಮಾನ್ಯ ಸಭೆಯ ಸೂಚನಾ ಪತ್ರ ಹಾಗೂ 40 ಪುಟಗಳ ನೋಟೀಸನ್ನು ಪ್ರಕಟಿಸಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕರ ವಿವರಣೆಯನ್ನು ಒಪ್ಪಿದ ಸಭೆಯು ದಿನಾಂಕ 21/08/2025 ಹಾಗೂ 22/08/2025 ರಂದು ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಸಾಮಾನ್ಯ ಅಂಚೆ ಮೂಲಕ ರಶೀದಿ ಸಂಖ್ಯೆ 2136005421082527494 ಹಾಗೂ 213605422082543786 ರಂತೆ "ಅ" ವರ್ಗದ ಸದಸ್ಯರು ಹಾಗೂ ವಿವಿಧ ಇಲಾಖೆಗಳಿಗೆ ಕಳುಹಿಸಲಾದ ಸಂಘದ 105 ನೇ ಸಾಲಿನ 40 ಪುಟಗಳುಳ್ಳ (ಒಟ್ಟು 3987) ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಅಂಗೀಕರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 2 :– 15-09-2024 ರಂದು ನಡೆದ 104 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**

**ನಿರ್ಣಯ :–** 15-09-2024 ರಂದು ನಡೆದ 104 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಸಾಮಾನ್ಯ ಸಭೆಯ ಪುಸ್ತಕದ ಪುಟ ಸಂಖ್ಯೆ 8 ರಿಂದ 11 ರವರೆಗೆ ನೀಡಲಾಗಿದ್ದು ಸದಸ್ಯರು ಬಯಸಿದರೆ ಸಭೆಯಲ್ಲಿ ಓದಲಾಗುವುದೆಂದು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ತಿಳಿಸಿದರು. ನಡಾವಳಿಗಳನ್ನು ಪುಸ್ತಕದಲ್ಲಿ ಮುದ್ರಿಸಿರುವುದರಿಂದ ಪುನಃ ಓದುವ ಅಗತ್ಯವಿಲ್ಲವೆಂದು ತಿಳಿಸಿದ ಸಭೆಯು ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 8 ರಿಂದ 11 ರ ವರೆಗಿನ ಒಟ್ಟು 4 ಪುಟಗಳ, ದಿನಾಂಕ 15-09-2024 ರಂದು ನಡೆದ ಸಹಕಾರಿಯ 104 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 3 :– 2024-2025 ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.**

**ನಿರ್ಣಯ :–** ಸಹಕಾರಿಯ 2024-2025 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಾಮಾನ್ಯ ಸಭೆಯ ಪುಸ್ತಕದ ಪುಟ ಸಂಖ್ಯೆ 12 ರಿಂದ 15 ರವರೆಗೆ ನೀಡಲಾಗಿದ್ದು ಸದಸ್ಯರು ಬಯಸಿದರೆ ಸಭೆಯಲ್ಲಿ ಓದಲಾಗುವುದೆಂದು

ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ತಿಳಿಸಿದರು. ವರದಿಯನ್ನು ಪುಸ್ತಕದಲ್ಲಿ ಮುದ್ರಿಸಿರುವುದರಿಂದ ಪುನಃ ಓದುವ ಅಗತ್ಯವಿಲ್ಲವೆಂದು ತಿಳಿಸಿದ ಸಭೆಯು ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 12 ರಿಂದ 15ರ ವರೆಗೆ ಸವಿವರವಾಗಿ ನೀಡಲಾದ 2024–2025 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 4 :– 2024–25ನೇ ಸಾಲಿನ ಲೆಕ್ಕ ಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**
**ನಿರ್ಣಯ :–** ಸಹಕಾರಿಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಎನ್. ಶಾಂತಾರಾಮ ನಾಯಕ್, ಲೆಕ್ಕ ಪರಿಶೋಧಕರು, ಕುಂದಾಪುರ ಇವರು ನೀಡಿದ 2024–2025 ನೇ ಸಾಲಿನ 136 ಪುಟಗಳ ಲೆಕ್ಕ ಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯು ತಯಾರಿಸಿದ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 16 ಮತ್ತು 17 ರಲ್ಲಿ ಸವಿವರವಾಗಿ ನೀಡಲಾದ ಅನುಪಾಲನಾ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ವರದಿಯ ಬಗ್ಗೆ ಚರ್ಚೆ ನಡೆದ ಬಳಿಕ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 5 :– 2024–25ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**
**ನಿರ್ಣಯ :–** ಆಡಳಿತ ಮಂಡಳಿಯು ಶಿಫಾರಸು ಮಾಡಿರುವ ನಿವ್ವಳ ಲಾಭದ ವಿಂಗಡಣೆಯನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 10(21) ಹಾಗೂ ಉಪವಿಧಿಗಳ ಪ್ರಕಾರ ದಿನಾಂಕ 12–08–2025 ರಂದು ನಡೆದ ಆಡಳಿತ ಮಂಡಳಿ ಸಭೆಯ ನಿರ್ಣಯ ಸಂಖ್ಯೆ 87/25–26 ರಂತೆ ಮಾಡಿದ ಶಿಫಾರಸನ್ನು ಅಂಗೀಕರಿಸಿದ ಸಭೆಯು ನಿವ್ವಳ ಲಾಭ **ರೂ. 1,14,26,542.38/–** ನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

| ಕ್ರ. ಸಂ | ಲಾಭ ವಿಂಗಡಣೆಯ ವಿವರ | ಎಷ್ಟು | ಮೊತ್ತ ರೂ. |
|---|---|---|---|
| 1. | ಮೀಸಲು ನಿಧಿ | 25% | 28,56,636.00 |
| 2. | ಸಹಕಾರಿ ಶಿಕ್ಷಣ ನಿಧಿ | 2% | 2,28,531.00 |
| 3. | ಸಹಕಾರಿ ಅಕಾಡೆಮಿ ಮೈಸೂರು ನಿಧಿಗೆ | 0.5% | 57,133.00 |
| 4. | ಕಾರ್ಯಾಚರಣೆ ಮೀಸಲು ನಿಧಿಗೆ | 10% | 11,42,654.00 |
| 5. | ಸಾಮಾನ್ಯ ಕ್ಷೇಮ ನಿಧಿಗೆ | 5% | 5,71,327.00 |
| 6. | ಸಿಬ್ಬಂದಿ ಬೋನಸ್ಸು | 2 ತಿಂಗಳ ವೇತನ | 10,46,415.00 |
| 7. | 'ಅ' ವರ್ಗದ ಲಾಭಾಂಶ | 17% | 39,79,012.00 |
| | 'ಬ' ವರ್ಗದ ಲಾಭಾಂಶ | 17% | 68,562.00 |
| 8. | ಪಾಲು ಮುನಾಫೆ ಸಮೀಕರಣ ನಿಧಿ | 2% | 2,28,531.00 |
| 9. | ಸಾರ್ವಜನಿಕ ಉಪಕಾರ ನಿಧಿ | 2% | 2,28,531.00 |
| 10. | ಕಟ್ಟಡ ನಿಧಿಗೆ | 4% | 4,57,062.00 |
| 11. | ಸಿಬ್ಬಂದಿ/ಸದಸ್ಯರ ಕ್ಷೇಮ ನಿಧಿ | 2% | 2,28,531.00 |
| 12. | ಸದಸ್ಯರ ಶಿಕ್ಷಣ ನಿಧಿ | 2% | 2,28,531.00 |
| 13. | ಉಳಿದ ಮೊಬಲಗು ಮೀಸಲು ನಿಧಿಗೆ | | 1,05,086.38 |
| | | **ಒಟ್ಟು ಮೊತ್ತ ರೂ.** | **1,14,26,542.38** |

**ವಿಷಯ 6 :– 2024–25 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.**

**ನಿರ್ಣಯ :–** 2024–25 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚುಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರ ನೀಡಿ ಅಂದಾಜು ಮೀರಲು ಕಾರಣವನ್ನು ವಿವರಿಸಿದರು. ನಿರ್ದೇಶಕರ ವಿವರಣೆಯನ್ನು ಒಪ್ಪಿದ ಸಭೆಯು ಅಂದಾಜು ಮೀರಿದ 6 ಖರ್ಚುಗಳಾದ ಸಿಬ್ಬಂದಿ ಉಪದಾನ ಅನುವು **ರೂ. 1,70,623/–**, ಪಂಚಾಯತ್ ತೆರಿಗೆ **ರೂ. 18,850/–**, ಜಾಹೀರಾತು/ದೇಣಿಗೆ **ರೂ, 6,055/–**, ನೋಟೀಸು ಖರ್ಚು **ರೂ. 1,98,661/**, ಸಿಬ್ಬಂದಿ ಆರೋಗ್ಯ ಹಾಗೂ ಅಪಘಾತ ವಿಮೆ **ರೂ. 70,821/–** ಹಾಗೂ ಇ.ಎಸ್.ಐ **ರೂ. 16,978/–** ಸೇರಿದಂತೆ ಒಟ್ಟು **ರೂ. 4,81,988/–** (ರೂ. ನಾಲ್ಕು ಲಕ್ಷದ ಎಂಭತ್ತೊಂದು ಸಾವಿರದ ಒಂಭೈನೂರ ಎಂಭತ್ತೆಂಟು ಮಾತ್ರ) ಕ್ಕೆ ಸರ್ವಾನುಮತದಿಂದ ಮಂಜೂರಾತಿ ನೀಡಿತು.

**ವಿಷಯ 7 : –2025–26ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**

**ನಿರ್ಣಯ :–** ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯಲ್ಲಿ ವಿವರವಾಗಿ ನೀಡಲಾದ 2025–26 ನೇ ಸಾಲಿನ ಅಂದಾಜು ಆಯ ವ್ಯಯ ಪಟ್ಟಿಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಶ್ರೀ ಗಣೇಶ್ ನಾಯಕ್ ಸಭೆಯಲ್ಲಿ ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆದ ತರುವಾಯ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 18 ಹಾಗೂ 19 ರಲ್ಲಿ ಸವಿವರವಾಗಿ ನೀಡಲಾದ **ರೂ. 14,22,00,000/–** (ರೂಪಾಯಿ ಹದಿನಾಲ್ಕು ಕೋಟಿ ಇಪ್ಪತ್ತೆರಡು ಲಕ್ಷ ಮಾತ್ರ) ಒಟ್ಟು ಮೊತ್ತವನ್ನು ಹೊಂದಿರುವ **ರೂ. 1,60,00,000/–** (ರೂ. ಒಂದು ಕೋಟಿ ಅರವತ್ತು ಲಕ್ಷ) ನಿವ್ವಳ ಲಾಭವನ್ನು ನೀಡುವಂತಹ 2025–26 ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 8 :– 2024–25 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**

**ನಿರ್ಣಯ :–** 2024–25 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ವಿವರಗಳನ್ನು ಪರಿಶೀಲಿಸಿದ ಸಭೆಯು ವರದಿ ವರ್ಷದಲ್ಲಿ ನೂತನವಾಗಿ ಸೇರ್ಪಡೆಯಾದ "ಅ" ವರ್ಗದ 329, "ಬಿ" ವರ್ಗದ 4 ಸದಸ್ಯರ ಹಾಗೂ ಸದಸ್ಯತ್ವ ತ್ಯಜಿಸಿದ 28 "ಅ" ವರ್ಗದ, 13 "ಬಿ" ವರ್ಗದ ಸದಸ್ಯರ ವಿವರಗಳಿಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 9: – 2025–26 ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಲೆಕ್ಕ ಪರಿಶೋಧನಾ ಶುಲ್ಕ ನಿಗದಿ.**

**ನಿರ್ಣಯ :–** ಉಡುಪಿಯ ಮೆಸರ್ಸ್ ಕಾಮತ್ & ಕೊ, ಲೆಕ್ಕ ಪರಿಶೋಧಕರು, ಉಡುಪಿ–ಮಣಿಪಾಲ ರಸ್ತೆ, ಕುಂಜಿಬೆಟ್ಟು, ಉಡುಪಿ ಇವರನ್ನು ಲೆಕ್ಕ ಪರಿಶೋಧಕರನ್ನಾಗಿ ಆಯ್ಕೆ ಮಾಡುವಂತೆ ದಿನಾಂಕ 12–08–2025ರಂದು ನಡೆದ ಆಡಳಿತ ಮಂಡಳಿಯ ನಿರ್ಣಯ ಸಂಖ್ಯೆ 76/2025–26 ರಂತೆ ಶಿಫಾರಸು ಮಾಡಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯ ಗಮನಕ್ಕೆ ತಂದರು. ಮುಖ್ಯ ಕಾರ್ಯನಿರ್ವಾಹಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ –1277 ಹಾಗೂ ನೋಂದಣಿ ಸಂಖ್ಯೆ ಈ–25/02/2013–11:33:58 ಹೊಂದಿರುವ ಮೆಸರ್ಸ್ ಕಾಮತ್ & ಕೋ. ಲೆಕ್ಕಪರಿಶೋಧಕರು, ಉಡುಪಿ ಇವರನ್ನು 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ನೇಮಕಾತಿ

ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಲೆಕ್ಕಪರಿಶೋಧನಾ ಶುಲ್ಕವನ್ನು ವರದಿ ವರ್ಷಾಂತ್ಯದ ದುಡಿಯುವ ಬಂಡವಾಳವನ್ನು ಆಧರಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಪಾವತಿ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 10 : – 2026–27 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ನಿರ್ಣಯ :–** 2026–2027 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ, ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು ಆಯ್ಕೆ ಮಾಡುವಂತೆ ದಿನಾಂಕ 12–08–2025 ರಂದು ನಡೆದ ಆಡಳಿತ ಮಂಡಳಿಯು ನಿರ್ಣಯ ಸಂಖ್ಯೆ 77/2025–26 ರಂತೆ ಶಿಫಾರಸು ಮಾಡಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯ ಗಮನಕ್ಕೆ ತಂದರು. ಮುಖ್ಯ ಕಾರ್ಯನಿರ್ವಾಹಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ –1229 ಹಾಗೂ ನೋಂದಣಿ ಸಂಖ್ಯೆ ಈ–05/07/2023–11:34:36 ಹೊಂದಿರುವ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ, ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು 2026–27 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಮೂರೂ ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕವಾಗಿ ವಾರ್ಷಿಕ ರೂ 1,75,000/–+ ಜಿ.ಎಸ್.ಟಿ. (ರೂ. ಒಂದು ಲಕ್ಷದ ಎಪ್ಪತ್ತೈದು ಸಾವಿರ ಮತ್ತು ಜಿ.ಎಸ್.ಟಿ.) ನಿಗದಿ ಪಡಿಸಿ ಸರ್ವಾನುಮತದ ನಿರ್ಣಯ ಕೈಗೊಂಡಿತು.

**ವಿಷಯ 11 :– 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ನಿರ್ಣಯ :–** ಆಡಳಿತ ಮಂಡಳಿಯು ಶಿಫಾರಸು ಮಾಡಿದ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 15 ರಲ್ಲಿ ವಿವರವಾಗಿ ನೀಡಲಾದ 2025–26 ನೇ ಸಾಲಿನ ಕ್ರಿಯಾ ಯೋಜನೆಗಳ ಕುರಿತು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕೊನೆಗೆ, ಆಡಳಿತ ಮಂಡಳಿಯು ಶಿಫಾರಸು ಮಾಡಿದ 2025–26 ನೇ ಸಾಲಿನ ಕ್ರಿಯಾ ಯೋಜನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 12 : ಮೀಸಲು ಹಾಗು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

**ನಿರ್ಣಯ:** 2024–25 ನೇ ಸಾಲಿನಲ್ಲಿ ಶಿಕ್ಷಣ ನಿಧಿಯ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸಿದ ಮೊತ್ತ ರೂ 2,18,198/– ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ನೀಡಲಾದ ಮೊತ್ತ ರೂ 2,14,990/– ರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ವಿವರ ನೀಡಿದರು. ಕಾರ್ಯನಿರ್ವಾಹಕರು ನೀಡಿದ ವಿವರಗಳನ್ನು ಪರಿಶೀಲಿಸಿದ ಸಭೆಯು ಎರಡೂ ನಿಧಿಗಳ ವಾಸ್ತವಿಕ ಬಳಕೆಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 13 : ಸಿಬ್ಬಂದಿ ಸೇವಾ ನಿಯಮಗಳಲ್ಲಿ ಕಾಲಮಿತಿ ಭಡ್ತಿ ಸೇರ್ಪಡೆಗೊಳಿಸುವ ಕುರಿತು.**

**ನಿರ್ಣಯ:** ಒಂದೇ ಹುದ್ದೆಯಲ್ಲಿ ನಿರಂತರ 10, 15 ಹಾಗೂ 20 ವರ್ಷಗಳ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ಇತರ ಸಹಕಾರಿ ಸಂಸ್ಥೆಗಳಲ್ಲಿ ನೀಡುವಂತೆ 1 ವಾರ್ಷಿಕ ಮುಂಬಡ್ತಿ ನೀಡಲು ಆಡಳಿತ ಮಂಡಳಿಯು ದಿನಾಂಕ 12–08–2025 ರಂದು ನಡೆದ ಆಡಳಿತ ಮಂಡಳಿ ಸಭೆಯ ನಿರ್ಣಯ ನಂಬ್ರ 85/25–26 ರಂತೆ ನಿರ್ಧರಿಸಿದ್ದು

ಸಾಮಾನ್ಯ ಸಭೆಯು ಸದ್ರಿ ನಿರ್ಣಯವನ್ನು ಅನುಮೋದಿಸಿ ಅನುಷ್ಠಾನಕ್ಕೆ ಅನುಮತಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮನವಿ ಮಾಡಿದರು.

ಆಡಳಿತ ಮಂಡಳಿಯ ನಿರ್ಣಯ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಮನವಿಯನ್ನು ಪುರಸ್ಕರಿಸಿದ ಸಭೆಯು 01-09-2025 ರಂತೆ ಅನ್ವಯವಾಗುವಂತೆ ಕಾಲಮಿತಿ ಭಡ್ತಿ ಕುರಿತ ನಿಯಮಾವಳಿಗಳನ್ನು ಸಿಬ್ಬಂದಿ ಸೇವಾ ನಿಯಮಗಳಲ್ಲಿ ಸೇರ್ಪಡೆಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 13 :** ಅನುತ್ಪಾದಕ ಸಾಲಗಳನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.

**ನಿರ್ಣಯ:** ಸಾಲಗಳ ಒಟ್ಟು ರೂ 15,15,269/- ಮೊತ್ತಕ್ಕೆ ಈಗಾಗಲೇ ದಾವಾ ದಾಖಲಿಸಿ ವಸೂಲಾತಿ ಪ್ರಕ್ರಿಯೆಗಳು ನಡೆಯುತ್ತಲ್ಲಿದ್ದು, ಸಾಲ ವಸೂಲಾತಿಯಲ್ಲಿ ವಿಳಂಬವಾಗುತ್ತಿರುವುದರಿಂದ ಸದ್ರಿ ಮೊತ್ತವನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಟ್ಟು ಸಾಲ ವಸೂಲಾತಿ ಪ್ರಕ್ರಿಯೆ ಮುಂದುವರೆಸಲು ಅನುಮತಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ಮನವಿ ಮಾಡಿದರು. ಈ ಬಗ್ಗೆ ದಿನಾಂಕ 12-08-2025 ರಂದು ನಡೆದ ಆಡಳಿತ ಮಂಡಳಿ ನಿರ್ಣಯ ನಂಬ್ರ 84/2025-26 ರ ವಿವರವನ್ನು ಸಭೆಯ ಮುಂದಿಟ್ಟರು.

ಆಡಳಿತ ಮಂಡಳಿ ನಿರ್ಣಯ ಹಾಗೂ ಮುಖ್ಯ ಕಾರ್ಯನಿರ್ವಾಹಕರ ವಿವರಣೆಗೆ ಒಪ್ಪಿದ ಸಭೆಯು 50 ಸಾಲಗಳ ಒಟ್ಟು ರೂ 15,15,269/- ನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡಲು ಸರ್ವಾನುಮತದಿಂದ ಅನುಮತಿ ನೀಡಿತು. ಸದ್ರಿ ಸಾಲಗಳ ವಸೂಲಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸಭೆಯು ಸೂಚಿಸಿತು.

ಸಭೆಯ ಅಂತ್ಯದಲ್ಲಿ, ಠೇವಣಿ ಹಾಗೂ ಸಾಲಗಳ ವಿಭಾಗದಲ್ಲಿ ಅತ್ಯುತ್ತಮ ಸಾಧನೆಗೈದ ಉಪ್ಪುಂದ ಶಾಖೆಯ ವ್ಯವಸ್ಥಾಪಕ ಶ್ರೀ ರಾಜೇಶ್ ಹಾಗೂ ಹಿರಿಯ ಸಹಾಯಕ ಶ್ರೀ ಗಿರೀಶ್ ಶ್ಯಾನುಭಾಗ್, ಕಳೆದ 25 ವರ್ಷಗಳಿಂದ ಸಂಘದ ಪ್ರಧಾನ ಕಚೇರಿಯಲ್ಲಿ ಚಿನ್ನಾಭರಣ ಪರೀಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಜಿ ಉದಯ ಕುಮಾರ್ ಶೇಟ್, ಹಿಂದಿನ ಸಾಲುಗಳಲ್ಲಿ ಸಾಮಾನ್ಯ ಸಭೆ ಹಾಗೂ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮಗಳಿಗೆ ವಿಶೇಷ ಸಹಕಾರ ನೀಡಿದ ಸಂಘದ ಸದಸ್ಯ ನಂಬ್ರ 746 ನೇ ಶ್ರೀ ಜಿ. ಸುದನೇಶ್ ಶ್ಯಾನುಭಾಗ್, ಸಂಘದ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀ ಎಮ್. ಮಧುಕರ ಪೈ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಡಾ. ಕಾಶಿನಾಥ ಪೈ ಯವರನ್ನು ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು.

ನಿರ್ದೇಶಕರಾದ ಶ್ರೀ ಎಚ್. ಗಣೇಶ್ ಕಾಮತ್ ಹಾಗೂ ಶ್ರೀ ಕೆ. ಗೋಪಾಲಕೃಷ್ಣ ನಾಯಕ್ ಸಭೆಗೆ ಗೈರು ಹಾಜರಾಗಿದ್ದು, ಅಧ್ಯಕ್ಷರು ಸೇರಿದಂತೆ ಆಡಳಿತ ಮಂಡಳಿಯ 14 ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

**ಗಂಗೊಳ್ಳಿ**
**07-09-2025**

**ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕ**

# ಗಂಗೊಳ್ಳಿ ಟೌನ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗಂಗೊಳ್ಳಿ

## ಲೆಕ್ಕಪತ್ರ ನೀತಿಗಳು

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರ ಸೆಕ್ಷನ್ 32 ಮತ್ತು ಸೆಕ್ಷನ್ 33(7) ರ ನಿಬಂಧನೆಗಳ ಪ್ರಕಾರ, ಸಹಕಾರಿಯು ನಡೆಸಲಾದ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಸಹಕಾರಿ ವರ್ಷದ ಕೊನೆಯ ಕೆಲಸದ ದಿನದಂದು (ಮಾರ್ಚ್ 31) ಜಮಾ ಮತ್ತು ಖರ್ಚು ಖಾತೆ ಅಥವಾ ಆದಾಯ ಮತ್ತು ವೆಚ್ಚಗಳ ಖಾತೆ, ಲಾಭ ಮತ್ತು ನಷ್ಟದ ಖಾತೆ, ಹಾಗೂ ಆಸ್ತಿ–ಜವಾಬ್ದಾರಿ ಪಟ್ಟಿಯನ್ನು (ಬ್ಯಾಲೆನ್ಸ್ ಶೀಟ್) ಸಿದ್ಧಪಡಿಸತಕ್ಕದ್ದು. ಈ ಹಣಕಾಸು ವರದಿಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮತ್ತು ಸಹಕಾರ ಸಂಘಗಳ ಆಡಿಟ್ ನಿರ್ದೇಶಕರು ನಿಗದಿಪಡಿಸಿದ ನಮೂನೆಗಳಲ್ಲಿ ಸಿದ್ಧಪಡಿಸತಕ್ಕದ್ದು.

ಸಹಕಾರಿಯ ಆಸ್ತಿ–ಜವಾಬ್ದಾರಿ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ಖಾತೆಯ ಸಂಕಲನವು, ಸೌಹಾರ್ದ ಸಂಯುಕ್ತ ಸಹಕಾರಿ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಯಾವುದೇ ನಿರ್ದಿಷ್ಟ ನಿರ್ದೇಶನಗಳು, ನಿಯಮಗಳು ಅಥವಾ ಮಾರ್ಗಸೂಚಿಗಳಿಗೆ ಒಳಪಟ್ಟು, ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆ (ICAI) ಹೊರಡಿಸಿದ ಪ್ರಕಟಣೆಗಳು ಮತ್ತು ಲೆಕ್ಕಪತ್ರ ಮಾನದಂಡಗಳ (Accounting Standards) ಮಾರ್ಗದರ್ಶನದಲ್ಲಿರತಕ್ಕದ್ದು.

ಹಣಕಾಸು ವರದಿಗಳನ್ನು ಐತಿಹಾಸಿಕ ವೆಚ್ಚದ ಪರಿಕಲ್ಪನೆ (ಹಿಸ್ಟಾರಿಕಲ್ ಕೋಸ್ಟ್ ಕನ್ವೆನ್ಷನ್) ಅಡಿಯಲ್ಲಿ ಮತ್ತು ಲೆಕ್ಕಪತ್ರದ ಸಂಚಿತ ಆಧಾರದ ಮೇಲೆ (ಅಕ್ರೂಯಲ್ ಬೇಸಿಸ್ – ಬೇರೆ ರೀತಿಯಲ್ಲಿ ಹೇಳದ ಹೊರತು) ಸಿದ್ಧಪಡಿಸಬೇಕು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997 ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ನಿಯಮಗಳು ಅಥವಾ ಸುತ್ತೋಲೆಗಳ ಅಡಿಯಲ್ಲಿ ಸೂಚಿಸಲಾದ ಶಾಸನಬದ್ಧ ಅವಶ್ಯಕತೆಗಳಿಗೆ ಅನುಗುಣವಾಗಿರಬೇಕು. ಭಾರತೀಯ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳಿಗೆ (GAAP) ಅನುಗುಣವಾಗಿ ಹಣಕಾಸು ವರದಿಗಳ ತಯಾರಿಕೆಯು, ಹಣಕಾಸು ವರದಿಗಳ ದಿನಾಂಕದಂದು ವರದಿಯಾದ ಆಸ್ತಿಗಳು, ಜವಾಬ್ದಾರಿಗಳ ಮೊತ್ತ ಮತ್ತು ಸಂಭಾವ್ಯ ಜವಾಬ್ದಾರಿಗಳ (Contingent Liabilities) ಪ್ರಕಟಣೆಯ ಮೇಲೆ, ಹಾಗೆಯೇ ವರದಿ ಮಾಡುವ ಅವಧಿಯಲ್ಲಿ ವರದಿಯಾದ ಆದಾಯ ಮತ್ತು ವೆಚ್ಚಗಳ ಮೇಲೆ ಪರಿಣಾಮ ಬೀರುವ ಅಂದಾಜುಗಳು ಮತ್ತು ಊಹೆಗಳನ್ನು ಮಾಡಲು ಆಡಳಿತ ಮಂಡಳಿಯ ಅಗತ್ಯತೆಯನ್ನು ಕೋರುತ್ತದೆ.

ಸೌಹಾರ್ದ ಸಂಯುಕ್ತ ಸಹಕಾರಿ ಆಡಿಟ್ ಮಾರ್ಗಸೂಚಿಗಳು ಕಡ್ಡಾಯಗೊಳಿಸಿದಂತೆ ಸಹಕಾರಿಯು ಹಣಕಾಸು ವರದಿಗಳಲ್ಲಿ ಎಲ್ಲಾ ಅಗತ್ಯ ಮಾಹಿತಿಗಳನ್ನು ಮತ್ತು ಖಾತೆಗಳ ಟಿಪ್ಪಣಿಗಳನ್ನು ಬಹಿರಂಗಪಡಿಸತಕ್ಕದ್ದು. ಈ ಬಹಿರಂಗಪಡಿಸುವಿಕೆಗಳು ಇತರ ಅನ್ವಯವಾಗುವ ತೆರಿಗೆ ಮತ್ತು ಸಹಕಾರಿ ಕಾಯ್ದೆಗಳು, ನಿಯಮಗಳು ಅಥವಾ ಹಣಕಾಸು ವರದಿ ಮಾನದಂಡಗಳ ಅಡಿಯಲ್ಲಿನ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳಿಗೆ ಪೂರಕವಾಗಿರಲು ಉದ್ದೇಶಿಸಲಾಗಿದೆಯೇ ಹೊರತು, ಅವುಗಳನ್ನು ಬದಲಿಸಲು ಅಲ್ಲ.

**ಮುಖ್ಯ ಲೆಕ್ಕಪತ್ರ ನೀತಿಗಳು:**

ಹಣಕಾಸು ವರದಿಗಳ ತಯಾರಿಕೆಯಲ್ಲಿ ಅಳವಡಿಸಿಕೊಂಡ ಲೆಕ್ಕಪತ್ರ ನೀತಿಗಳು ಸಹಕಾರಿಯ ಆಚರಣೆಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶನಗಳು ಮತ್ತು ಆಡಳಿತ ಮಂಡಳಿಯು ಅಂಗೀಕರಿಸಿದ ನಿರ್ಣಯಗಳಿಗೆ ಅನುಗುಣವಾಗಿವೆ.

**1. ಸಾಲಗಳು**

ಎ) ಸಾಲಗಳ ವರ್ಗೀಕರಣ ಸೊಸೈಟಿಯು ತನ್ನ ಸಾಲ ಸೌಲಭ್ಯಗಳು ಮತ್ತು ಮುಂಗಡಗಳನ್ನು ಆಸ್ತಿಯ ಒಪ್ಪಂದದ ಅವಧಿಯ ಮುಕ್ತಾಯದ ಆಧಾರದ ಮೇಲೆ ಎರಡು ಪ್ರಾಥಮಿಕ ವರ್ಗಗಳಾಗಿ ವರ್ಗೀಕರಿಸುತ್ತದೆ:

* **ಚಾಲ್ತಿಯಲ್ಲಿರುವ ಸಾಲಗಳು (PA):** ಪ್ರಸ್ತುತ ಚಾಲ್ತಿಯಲ್ಲಿರುವ ಅಥವಾ ಅವುಗಳ ಅನುಮೋದಿತ ಮರುಪಾವತಿ ಅವಧಿಯೊಳಗಿರುವ ಚಾಲ್ತಿಯಲ್ಲಿ ಇರುವ ಸಾಲಗಳು.

* **ಸುಸ್ತಿ ಸಾಲಗಳು (NPA):** ಒಪ್ಪಂದದ ಸಂಪೂರ್ಣ ಅವಧಿ ಮತ್ತು ಇಲ್ಲಿ ವ್ಯಾಖ್ಯಾನಿಸಲಾದ ತದನಂತರದ ರಿಯಾಯಿತಿ ಅವಧಿ ಮುಗಿದ ನಂತರವೂ ವಸೂಲಾಗದೆ ಉಳಿದಿರುವ ಸುಸ್ತಿ ಸಾಲಗಳು.

NPA ವರ್ಗೀಕರಣದ ಗುರುತಿಸುವಿಕೆ ಮತ್ತು ಸಮಯ

* **ಅವಧಿಯ ವಿನಾಯಿತಿ (Tenure Immunity):** ಸಾಲದ ಆಸ್ತಿಯು ಅದರ ಒಪ್ಪಂದದ ಸಂಪೂರ್ಣ ಅವಧಿಯವರೆಗೆ ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸುವ ಚಾಲ್ತಿಯಲ್ಲಿ ಇರುವ ಸಾಲಗಳು (PA) ಎಂದೇ ವರ್ಗೀಕರಿಸಲ್ಪಟ್ಟಿರುತ್ತದೆ. ಸಾಲಗಾರನಿಂದ ಯಾವುದೇ ಸುಸ್ತಿ, ಮರುಪಾವತಿ ಮಾಡದಿರುವುದು ಅಥವಾ ಮಧ್ಯಂತರ ಮಾಸಿಕ ಕಂತುಗಳ ಲೋಪಗಳಿದ್ದಾಗ್ಯೂ, ಅದರ ಕಾರ್ಯಾಚರಣೆಯ ಅವಧಿಯಲ್ಲಿ ಯಾವುದೇ ಸಾಲವನ್ನು NPA ದರ್ಜೆಗೆ ಇಳಿಸಬಾರದು.

* **ಸುಸ್ತಿ (Overdue) ಸ್ಥಿತಿಯ ನಿರ್ಧಾರ:** ಒಂದು ಸಾಲದ ಖಾತೆಯನ್ನು ಅದರ ಒಪ್ಪಂದದ ಅವಧಿಯು ಸಂಪೂರ್ಣವಾಗಿ ಮುಗಿದ ನಂತರ ಮತ್ತು ಎಲ್ಲಾ ನಿಗದಿತ ಕಂತುಗಳ ಕಾಲಮಿತಿ ಮುಗಿದ ನಂತರವಷ್ಟೇ 'ಸುಸ್ತಿ' (overdue) ಎಂದು ಪರಿಗಣಿಸಲಾಗುವುದು.

* **NPA ಗುರುತಿಸುವಿಕೆಯ ದಿನಾಂಕ:** ಅವಧಿ ಮೀರಿದ ಸಾಲದ ಖಾತೆಯನ್ನು ಅವಧಿ ಮುಗಿದ ತಕ್ಷಣ ಸುಸ್ತಿ ಸಾಲ (NPA) ಎಂದು ವರ್ಗೀಕರಿಸಲಾಗುವುದಿಲ್ಲ. ಸಾಲವು ಅವಧಿ ಮೀರಿದ ಹಣಕಾಸು ವರ್ಷದ ಮುಕ್ತಾಯದಲ್ಲಿ (ಮಾರ್ಚ್ 31) ಮಾತ್ರ ಆ ಖಾತೆಯನ್ನು ಅಧಿಕೃತವಾಗಿ ಸುಸ್ತಿ ಸಾಲಗಳು (NPA) ಎಂದು ಹೆಸರಿಸಲಾಗುವುದು.

* ಒಂದು ಖಾತೆಯನ್ನು ಹಣಕಾಸು ವರ್ಷದ ಕೊನೆಯಲ್ಲಿ ಸುಸ್ತಿ ಸಾಲ (NPA) ಎಂದು ವರ್ಗೀಕರಿಸಿದ ನಂತರ, ಸೊಸೈಟಿಯು ಸಾಲದ ಅವಧಿ ಮತ್ತು ವಸೂಲಾಗದಿರುವಿಕೆಯ ಕ್ರಮೇಣ ಹೆಚ್ಚುತ್ತಿರುವ ಅಪಾಯವನ್ನು ಪ್ರತಿಬಿಂಬಿಸಲು ಸಾಲವನ್ನು ಮತ್ತಷ್ಟು ವರ್ಗೀಕರಿಸುತ್ತದೆ. ಉಪವರ್ಗಗಳನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ:

    * **ಸಬ್–ಸ್ಟಾಂಡರ್ಡ್ ಆಸ್ತಿಗಳು 1:** ಒಂದು (1) ವರ್ಷಕ್ಕಿಂತ ಕಡಿಮೆ ಅವಧಿಗೆ NPA ಎಂದು ವರ್ಗೀಕರಿಸಲಾದ ಸಾಲಗಳು.

    * **ಸಬ್–ಸ್ಟಾಂಡರ್ಡ್ ಆಸ್ತಿಗಳು 2:** ಒಂದು (1) ವರ್ಷಕ್ಕಿಂತ ಹೆಚ್ಚು ಆದರೆ ಮೂರು (3) ವರ್ಷಗಳಿಗಿಂತ ಹೆಚ್ಚಿಲ್ಲದ ಅವಧಿಗೆ NPA ಎಂದು ವರ್ಗೀಕರಿಸಲಾದ ಸಾಲಗಳು.

    * **ಸಂದೇಹಾಸ್ಪದ (Doubtful) ಆಸ್ತಿಗಳು 1:** ಮೂರು (3) ವರ್ಷಗಳಿಗಿಂತ ಹೆಚ್ಚು ಆದರೆ ನಾಲ್ಕು (4) ವರ್ಷಗಳಿಗಿಂತ ಹೆಚ್ಚಿಲ್ಲದ ಅವಧಿಗೆ NPA ಎಂದು ವರ್ಗೀಕರಿಸಲಾದ ಸಾಲಗಳು.

    * **ಸಂದೇಹಾಸ್ಪದ (Doubtful) ಆಸ್ತಿಗಳು 2:** ನಾಲ್ಕು (4) ವರ್ಷಗಳಿಗಿಂತ ಹೆಚ್ಚು ಆದರೆ ಆರು (6) ವರ್ಷಗಳಿಗಿಂತ ಹೆಚ್ಚಿಲ್ಲದ ಅವಧಿಗೆ NPA ಎಂದು ವರ್ಗೀಕರಿಸಲಾದ ಸಾಲಗಳು.

* **ಸಂದೇಹಾಸ್ಪದ (Doubtful) ಆಸ್ತಿಗಳು 3:** ಆರು (6) ವರ್ಷಗಳಿಗಿಂತ ಹೆಚ್ಚು ಅವಧಿಗೆ NPA ಎಂದು ವರ್ಗೀಕರಿಸಲಾದ ಸಾಲಗಳು.
* **ನಷ್ಟದ ಆಸ್ತಿಗಳು (Loss Assets):** ಆಡಳಿತ ಮಂಡಳಿಯು ನಿರ್ಧರಿಸಿದಂತೆ.

* ಅವಧಿ ಮೀರಿದ ಸಾಲವನ್ನು ಸುಸ್ತಿ ಸಾಲ (NPA) ಎಂದು ವರ್ಗೀಕರಿಸುವ ಅಂತಿಮ ನಿರ್ಧಾರವು ಸಂಪೂರ್ಣವಾಗಿ ಆಡಳಿತ ಮಂಡಳಿಗೆ ಸೇರಿರುತ್ತದೆ. ಸಾಲದ ಸಂಪೂರ್ಣ ಒಪ್ಪಂದದ ಅವಧಿ ಮುಗಿದಿದ್ದರೂ ಅದನ್ನು ಸುಸ್ತಿ ಸಾಲ (NPA) ಎಂದು ವರ್ಗೀಕರಿಸಬಾರದು ಎಂದು ಆಡಳಿತ ಮಂಡಳಿಯು ಬಹುಮತದ ನಿರ್ಧಾರದಿಂದ ನಿರ್ಣಯಿಸಿದರೆ, ಆ ಸಾಲವನ್ನು ಚಾಲ್ತಿಯಲ್ಲಿರುವ ಸಾಲ ಎಂದೇ ಮುಂದುವರಿಸಲಾಗುವುದು.

**ಬಿ) ದರ್ಜೆ ಮೇಲ್ದರ್ಜೀಕರಣ (Upgrade) ನೀತಿ ಮತ್ತು ವಸೂಲಾತಿ**

* ಸಾಲವನ್ನು ಅಧಿಕೃತವಾಗಿ ಸುಸ್ತಿ ಸಾಲ (NPA) ಎಂದು ವರ್ಗೀಕರಿಸಿದ ನಂತರ, ಸಾಲಗಾರನು ತದನಂತರ ಪಾವತಿಗಳನ್ನು ಪುನರಾರಂಭಿಸಿದರೂ ಅಥವಾ ಸುಸ್ತಿಯನ್ನು ಚುಕ್ತಾ ಮಾಡಿದರೂ ಸಹ, ಅದನ್ನು ಮತ್ತೆ ಚಾಲ್ತಿಯಲ್ಲಿರುವ ಸಾಲ (PA) ಎಂದು ಮೇಲ್ದರ್ಜೆಗೆ ಏರಿಸಲಾಗುವುದಿಲ್ಲ.
* ಸಾಲವನ್ನು ಸುಸ್ತಿ ಸಾಲ (NPA) ಎಂದು ವರ್ಗೀಕರಿಸಿದ ನಂತರ ಸ್ವೀಕರಿಸಲಾದ ಎಲ್ಲಾ ಮುಂದಿನ ಮರುಪಾವತಿಗಳು, ವಸೂಲಾತಿಗಳು ಮತ್ತು ಸಂಗ್ರಹಣೆಗಳನ್ನು ಸಂಪೂರ್ಣವಾಗಿ ಮೀಸಲಾದ NPA ವಸೂಲಾತಿ ಖಾತೆಗೆ ಜಮಾ ಮಾಡಲಾಗುತ್ತದೆ ಮತ್ತು ಆಂತರಿಕ ಲೆಕ್ಕಪತ್ರ ನಿಯಮಗಳ ಪ್ರಕಾರ ನಿರ್ವಹಿಸಲಾಗುತ್ತದೆ.

**ಸಿ) ನಷ್ಟ ಕಾಯ್ದಿರಿಸುವಿಕೆ (Provisioning) ನೀತಿ**

* ಸಂಭಾವ್ಯ ಸಾಲದ ನಷ್ಟದ ವಿರುದ್ಧ ಸೊಸೈಟಿಯನ್ನು ರಕ್ಷಿಸಲು ಸಹಕಾರಿಯು ಸುಸ್ತಿ ಸಾಲಗಳ (NPA) ವಿರುದ್ಧ ನಷ್ಟ ಕಾಯ್ದಿರಿಸುವಿಕೆಯನ್ನು ನಿರ್ವಹಿಸುತ್ತದೆ.
* ಇಂತಹ ಸುಸ್ತಿ ಸಾಲ (NPA) ಗಳ ವಿರುದ್ಧ ರಚಿಸಬೇಕಾದ ನಷ್ಟ ಕಾಯ್ದಿರಿಸುವಿಕೆಯ ಶೇಕಡಾವಾರು ಮತ್ತು ಪ್ರಮಾಣವನ್ನು ಹಣಕಾಸಿನ ವಿವೇಕ, ನಿರ್ದಿಷ್ಟ ಪ್ರಕರಣದ ಅಪಾಯ ಮತ್ತು ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶನಗಳ ಆಧಾರದ ಮೇಲೆ ಆಡಳಿತ ಮಂಡಳಿಯು ಕಾಲಕಾಲಕ್ಕೆ ಪರಿಶೀಲಿಸುತ್ತದೆ, ನಿರ್ಧರಿಸುತ್ತದೆ ಮತ್ತು ಅನುಮೋದಿಸುತ್ತದೆ.
* ಸುಸ್ತಿ ಸಾಲ (NPA) ಎಂದು ವರ್ಗೀಕರಿಸಲಾದ ಸಾಲಗಳಿಗೆ ನಷ್ಟ ಕಾಯ್ದಿರಿಸುವಿಕೆಯನ್ನು ಈ ಕೆಳಗಿನ ಒಪ್ಪಿಗೆಯಾದ ದರಗಳ ಪ್ರಕಾರ ರಚಿಸಬೇಕು
  * ಸ್ಟ್ಯಾಂಡರ್ಡ್ ಆಸ್ತಿಗಳು – 0.25%
  * ಸಬ್‌ಸ್ಟ್ಯಾಂಡರ್ಡ್ ಆಸ್ತಿಗಳು – 1 – 5%
  * ಸಬ್‌ಸ್ಟ್ಯಾಂಡರ್ಡ್ ಆಸ್ತಿಗಳು – 2 – 10%
  * ಸಂದೇಹಾಸ್ಪದ – 1 ಆಸ್ತಿಗಳು – 12%
  * ಸಂದೇಹಾಸ್ಪದ – 2 ಆಸ್ತಿಗಳು – 15%
  * ಸಂದೇಹಾಸ್ಪದ – 3 ಆಸ್ತಿಗಳು – 25%
  * ನಷ್ಟದ ಆಸ್ತಿಗಳು – 100%

**2. ಆದಾಯದ ಗುರುತಿಸುವಿಕೆ (Revenue Recognition)**

**ಎ) ಸಾಲಗಳ ಮೇಲಿನ ಬಡ್ಡಿ ಆದಾಯ:** ಸಾಲವನ್ನು ಕಾರ್ಯನಿರ್ವಹಿಸುವ ಆಸ್ತಿ ಎಂದು ವರ್ಗೀಕರಿಸಿದ್ದರೆ ಮಾತ್ರ ಮುಂಗಡಗಳ ಮೇಲಿನ ಬಡ್ಡಿ ಆದಾಯವನ್ನು ಸ್ವೀಕೃತಿಯ ಆಧಾರದ ಮೇಲೆ ಗುರುತಿಸಲಾಗುತ್ತದೆ. ಸಹಕಾರಿಯ ನೀತಿಗೆ ಅನುಗುಣವಾಗಿ, ಸಾಲವು ಸಂಪೂರ್ಣ ಮರುಪಾವತಿಯಾಗದೆ ತನ್ನ ಸಂಪೂರ್ಣ ಒಪ್ಪಂದದ ಅವಧಿಯನ್ನು ಪೂರ್ಣಗೊಳಿಸಿದಾಗ ಮತ್ತು ಆಡಳಿತ ಮಂಡಳಿಯಿಂದ ಕಾರ್ಯನಿರ್ವಹಿಸದ ಆಸ್ತಿ (NPA) ಎಂದು ವರ್ಗೀಕರಿಸಲ್ಪಟ್ಟ ನಂತರ, ಯಾವುದೇ ಮುಂದಿನ ಗಳಿಸದ ಬಡ್ಡಿಯನ್ನು ಆದಾಯ ಎಂದು ಗುರುತಿಸಲಾಗುವುದಿಲ್ಲ. ಇಂತಹ ಖಾತೆಗಳಲ್ಲಿ ವಸೂಲಾದ ಯಾವುದೇ ಮುಂದಿನ ಅಸಲನ್ನು ನೇರವಾಗಿ NPA ವಸೂಲಾತಿ ಖಾತೆಗೆ ಜಮಾ ಮಾಡಲಾಗುತ್ತದೆ ಮತ್ತು ಸ್ವೀಕರಿಸಿದ ಯಾವುದೇ ಮುಂದಿನ ಬಡ್ಡಿಯನ್ನು ಬಡ್ಡಿ ಆದಾಯ ಎಂದು ಪರಿಗಣಿಸಲಾಗುತ್ತದೆ.

**ಬಿ) ಹೂಡಿಕೆಗಳ ಮೇಲಿನ ಬಡ್ಡಿ ಆದಾಯ:** ಸೌಹಾರ್ದ ಸಂಯುಕ್ತ ಸಹಕಾರಿ ಅಥವಾ ಇತರ ಬ್ಯಾಂಕುಗಳಲ್ಲಿ ಇರಿಸಲಾದ ಸ್ಥಿರ ಠೇವಣಿಗಳು ಸೇರಿದಂತೆ ಹೂಡಿಕೆಗಳ ಮೇಲಿನ ಬಡ್ಡಿ ಆದಾಯವನ್ನು ಒಪ್ಪಂದದ ದರದಲ್ಲಿ ಸ್ವೀಕೃತಿಯ ಆಧಾರದ ಮೇಲೆ ಗುರುತಿಸಲಾಗುತ್ತದೆ.

**ಸಿ) ಲಾಭಾಂಶ (Dividend) ಆದಾಯ:** ಸಹಕಾರಿಯ ಲಾಭಾಂಶವನ್ನು ವಾಸ್ತವವಾಗಿ ಸ್ವೀಕರಿಸಿದಾಗ ಸ್ವೀಕೃತಿಯ ಆಧಾರದ ಮೇಲೆ ಲಾಭಾಂಶ ಆದಾಯವನ್ನು ಗುರುತಿಸಲಾಗುತ್ತದೆ ಮತ್ತು ಲೆಕ್ಕಹಾಕಲಾಗುತ್ತದೆ.

**ಡಿ) ಶುಲ್ಕಗಳು ಮತ್ತು ಕಮಿಷನ್:** ಸಾಲ ಸಂಸ್ಕರಣೆ ಶುಲ್ಕಗಳು, ಪ್ರವೇಶ ಶುಲ್ಕಗಳು ಮತ್ತು ಇತರ ವಹಿವಾಟು ಸಂಬಂಧಿತ ಶುಲ್ಕಗಳನ್ನು ಸದಸ್ಯರು ಪಾವತಿಸಬೇಕಾದಾಗ ನಗದು/ಬಾಕಿ ಆಧಾರದ ಮೇಲೆ ಮುಂಗಡವಾಗಿ ಲೆಕ್ಕಹಾಕಲಾಗುತ್ತದೆ. ಇತರ ಶುಲ್ಕದ ಆದಾಯವನ್ನು ಅದು ಅಳೆಯಬಹುದಾದಾಗ ಮತ್ತು ಸಂಗ್ರಹಣೆಯ ಸಮಂಜಸವಾದ ನಿಶ್ಚಿತತೆ ಇದ್ದಾಗ ಗುರುತಿಸಲಾಗುತ್ತದೆ.

**ಇ) ದಂಡದ ಶುಲ್ಕಗಳು:** ಸುಸ್ತಿ ಅಥವಾ ಬಾಕಿ ಉಳಿಸಿಕೊಂಡಿರುವ ಸಾಲಗಳ ಮೇಲೆ ವಿಧಿಸಲಾಗುವ ದಂಡದ ಬಡ್ಡಿ ಮತ್ತು ಶುಲ್ಕಗಳನ್ನು ವಾಸ್ತವಿಕವಾಗಿ ವಸೂಲಾದಾಗ ಅಥವಾ ಸಂಗ್ರಹಣೆಯು ಸಂಪೂರ್ಣವಾಗಿ ಖಾತರಿಯಾದಾಗ ಮಾತ್ರ ಆದಾಯ ಎಂದು ಗುರುತಿಸಲಾಗುತ್ತದೆ.

**3. ಕರಭಾರ (Taxation)**

* **ಪ್ರಸ್ತುತ ತೆರಿಗೆ (Current Tax):** ಪ್ರಸ್ತುತ ಆದಾಯ ತೆರಿಗೆಯ ನಿಬಂಧನೆಯನ್ನು ಭಾರತೀಯ ಆದಾಯ ತೆರಿಗೆ ಕಾಯ್ದೆ, 1961/2025 ರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ ಮತ್ತು ಗುರುತಿಸಲಾಗುತ್ತದೆ. ಸಹಕಾರಿ ಸಂಘಗಳಿಗೆ ಲಭ್ಯವಿರುವ ಎಲ್ಲಾ ಅನ್ವಯವಾಗುವ ಶಾಸನಬದ್ಧ ವಿನಾಯಿತಿಗಳು, ಸವಲತ್ತುಗಳು ಮತ್ತು ಕಡಿತಗಳನ್ನು ಗಣನೆಗೆ ತೆಗೆದುಕೊಂಡ ನಂತರ ತೆರಿಗೆ ಹೊಣೆಗಾರಿಕೆಯನ್ನು ಲೆಕ್ಕಹಾಕಲಾಗುತ್ತದೆ.

* **ವಿಳಂಬಿತ ತೆರಿಗೆ (Deferred Tax):** ವಿಳಂಬಿತ ತೆರಿಗೆಯು ವಿಳಂಬಿತ ತೆರಿಗೆ ಆಸ್ತಿಗಳು ಅಥವಾ ಜವಾಬ್ದಾರಿಗಳಲ್ಲಿನ ನಿವ್ವಳ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ, ಇದು ಆ ಅವಧಿಯ ಲೆಕ್ಕಪತ್ರ ಆದಾಯ ಮತ್ತು ತೆರಿಗೆ ವಿಧಿಸಬಹುದಾದ ಆದಾಯದ ನಡುವಿನ ಸಮಯದ ವ್ಯತ್ಯಾಸಗಳ ತೆರಿಗೆ ಪರಿಣಾಮಗಳನ್ನು ಪ್ರತಿನಿಧಿಸುತ್ತದೆ.

* ಆಸ್ತಿ–ಜವಾಬ್ದಾರಿ ಪಟ್ಟಿಯ (ಬ್ಯಾಲೆನ್ಸ್ ಶೀಟ್) ದಿನಾಂಕದಂದು ಜಾರಿಯಲ್ಲಿರುವ ಅಥವಾ ಸಾರಭೂತವಾಗಿ ಜಾರಿಯಲ್ಲಿರುವ ತೆರಿಗೆ ದರಗಳು ಮತ್ತು ಕಾಯ್ದೆಗಳನ್ನು ಬಳಸಿಕೊಂಡು ವಿಳಂಬಿತ ತೆರಿಗೆ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಅಳೆಯಲಾಗುತ್ತದೆ.
* ವಿಳಂಬಿತ ತೆರಿಗೆ ಆಸ್ತಿಗಳನ್ನು ಅವುಗಳನ್ನು ವಸೂಲಿ ಮಾಡಿಕೊಳ್ಳಬಹುದಾದ ಸೂಕ್ತ ಭವಿಷ್ಯದ ತೆರಿಗೆ ವಿಧಿಸಬಹುದಾದ ಆದಾಯವು ಲಭ್ಯವಿರುತ್ತದೆ ಎಂಬ ಸಮಂಜಸವಾದ ನಿಶ್ಚಿತತೆಯ ಮಟ್ಟಿಗೆ ಮಾತ್ರ ಗುರುತಿಸಲಾಗುತ್ತದೆ. ಮುಂದುವರಿಸಲಾದ ನಷ್ಟಗಳು ಅಥವಾ ಹೀರಲ್ಪಡದ ಸವಕಳಿಯ ಸಂದರ್ಭದಲ್ಲಿ, ಭವಿಷ್ಯದ ತೆರಿಗೆ ಲಾಭಗಳ ಮನವರಿಕೆಯಾಗುವ ಪುರಾವೆಗಳ ಬೆಂಬಲದೊಂದಿಗೆ ವಾಸ್ತವಿಕ ನಿಶ್ಚಿತತೆ ಇದ್ದರೆ ಮಾತ್ರ ವಿಳಂಬಿತ ತೆರಿಗೆ ಆಸ್ತಿಗಳನ್ನು ಗುರುತಿಸಲಾಗುತ್ತದೆ.

**4. ನಿಬಂಧನೆಗಳು, ಸಂಭಾವ್ಯ ಜವಾಬ್ದಾರಿಗಳು ಮತ್ತು ಸಂಭಾವ್ಯ ಆಸ್ತಿಗಳು**

* **ನಿಬಂಧನೆಗಳು (Provisions):** ಹಿಂದಿನ ಘಟನೆಯ ಪರಿಣಾಮವಾಗಿ ಪ್ರಸ್ತುತ ಕಾನೂನು ಅಥವಾ ರಚನಾತ್ಮಕ ಬಾಧ್ಯತೆ ಇದ್ದಾಗ, ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರಹರಿವು ಅಗತ್ಯವಿರುತ್ತದೆ ಮತ್ತು ಮೊತ್ತದ ವಿಶ್ವಾಸಾರ್ಹ ಅಂದಾಜು ಮಾಡಬಹುದಾದಾಗ ಸಹಕಾರಿಯು ನಿಬಂಧನೆಯನ್ನು ಸೃಷ್ಟಿಸುತ್ತದೆ. ಪ್ರತಿ ಆಸ್ತಿ–ಜವಾಬ್ದಾರಿ ಪಟ್ಟಿಯ ದಿನಾಂಕದಂದು ನಿಬಂಧನೆಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಪ್ರಸ್ತುತ ಅತ್ಯುತ್ತಮ ಅಂದಾಜನ್ನು ಪ್ರತಿಬಿಂಬಿಸಲು ಸರಿಹೊಂದಿಸಲಾಗುತ್ತದೆ.
* **ಸಂಭಾವ್ಯ ಜವಾಬ್ದಾರಿಗಳು (Contingent Liabilities):** ಸಂಭಾವ್ಯ ಬಾಧ್ಯತೆ ಇದ್ದಾಗ ಅಥವಾ ಸಂಪನ್ಮೂಲಗಳ ಹೊರಹರಿವು ಸಾಧ್ಯವಿದ್ದರೂ ಅಸಂಭವವಾಗಿರುವ ಪ್ರಸ್ತುತ ಬಾಧ್ಯತೆ ಇದ್ದಾಗ ಖಾತೆಗಳ ಟಿಪ್ಪಣಿಗಳಲ್ಲಿ ಸಂಭಾವ್ಯ ಜವಾಬ್ದಾರಿಯ ಬಹಿರಂಗಪಡಿಸುವಿಕೆಯನ್ನು ಮಾಡಲಾಗುತ್ತದೆ. ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯು ತೀರಾ ದೂರದಾಗಿದ್ದಲ್ಲಿ, ಯಾವುದೇ ನಿಬಂಧನೆ ಅಥವಾ ಬಹಿರಂಗಪಡಿಸುವಿಕೆಯನ್ನು ಮಾಡಲಾಗುವುದಿಲ್ಲ.
* **ಸಂಭಾವ್ಯ ಆಸ್ತಿಗಳು (Contingent Assets):** ಹಣಕಾಸು ವರದಿಗಳಲ್ಲಿ ಸಂಭಾವ್ಯ ಆಸ್ತಿಗಳನ್ನು ಗುರುತಿಸಲಾಗುವುದಿಲ್ಲ. ಆದಾಗ್ಯೂ, ಅವುಗಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಆರ್ಥಿಕ ಪ್ರಯೋಜನಗಳ ಒಳಹರಿವು ವಾಸ್ತವಿಕವಾಗಿ ಖಚಿತವಾದರೆ, ಆಸ್ತಿ ಮತ್ತು ಸಂಬಂಧಿತ ಆದಾಯವನ್ನು ಆ ಬದಲಾವಣೆ ಸಂಭವಿಸಿದ ಅವಧಿಯಲ್ಲಿ ಗುರುತಿಸಲಾಗುತ್ತದೆ.

**5. ನಗದು ಮತ್ತು ನಗದು ಸಮಾನತೆಗಳು**

* ಸಹಕಾರಿಯ ನಗದು ಮತ್ತು ನಗದು ಸಮಾನತೆಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:
* ಕೈಯಲ್ಲಿರುವ ನಗದು/ಮಾರ್ಗ ಮಧ್ಯದಲ್ಲಿರುವ ನಗದು.
* ಜಿಲ್ಲಾ ಕೇಂದ್ರ ಸಹಕಾರಿ (DCC) ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಇತರ ವಾಣಿಜ್ಯ/ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಿರ್ವಹಿಸಲಾಗುತ್ತಿರುವ ಬಾಕಿಗಳು ಮತ್ತು ಕ್ಲಿಯರಿಂಗ್ ಖಾತೆಗಳು.
* ಅನುಮೋದಿತ ಹಣಕಾಸು ಸಂಸ್ಥೆಗಳೊಂದಿಗೆ ಅಲ್ಪಾವಧಿ ನೋಟಿಸ್ ಕರೆ ಠೇವಣಿಗಳು.

  (ಗಮನಿಸಿ: ಇ–ಸ್ಟ್ಯಾಂಪಿಂಗ್ ಮುಂಗಡ ಖಾತೆಗಳಂತಹ ಮುಂಚಿತವಾಗಿ ಧನಸಹಾಯ ಪಡೆದ ಶಾಸನಬದ್ಧ ಬಾಕಿಗಳನ್ನು ನಗದು ಮತ್ತು ನಗದು ಸಮಾನತೆಗಳಿಂದ ಸ್ಪಷ್ಟವಾಗಿ ಹೊರಗಿಡಲಾಗಿದೆ).

**6. ಇ–ಸ್ಟ್ಯಾಂಪಿಂಗ್ ಬಾಕಿಗಳು ಮತ್ತು ಸ್ಟ್ಯಾಂಪ್ ದಾಸ್ತಾನು (ಹೊಸ ವಿಭಾಗ)**

* **ಲೆಕ್ಕಪತ್ರ ನಿರ್ವಹಣೆ:** ಇ–ಸ್ಟ್ಯಾಂಪಿಂಗ್ ವ್ಯಾಲೆಟ್‌ನಲ್ಲಿ ಲಭ್ಯವಿರುವ ಅಥವಾ ಎಲೆಕ್ಟ್ರಾನಿಕ್ ಸ್ಟ್ಯಾಂಪಿಂಗ್‌ಗಾಗಿ ಸೆಂಟ್ರಲ್ ರೆಕಾರ್ಡ್ ಕೀಪಿಂಗ್ ಏಜೆನ್ಸಿಗೆ ಮುಂಗಡವಾಗಿ ನೀಡಲಾದ ಬಾಕಿಯನ್ನು "ಇತರ ಚಾಲ್ತಿ ಆಸ್ತಿಗಳು / ಮುಂಗಡ ವಸೂಲಾತಿ" ಅಥವಾ "ಸ್ಟ್ಯಾಂಪ್‌ಗಳ ದಾಸ್ತಾನು" ಅಡಿಯಲ್ಲಿ ಚಾಲ್ತಿ ಆಸ್ತಿ ಎಂದು ಪರಿಗಣಿಸಲಾಗುತ್ತದೆ.

**7. ಆಸ್ತಿಗಳ ಮೌಲ್ಯಕ್ಷಯ (Impairment of Assets)**

* **ಮೌಲ್ಯಮಾಪನ:** ಸಹಕಾರಿಯು ಪ್ರತಿ ಆಸ್ತಿ–ಜವಾಬ್ದಾರಿ ಪಟ್ಟಿಯ ದಿನಾಂಕದಂದು ಸ್ಥಿರ ಅಥವಾ ಹಣಕಾಸಿನೇತರ ಆಸ್ತಿಯು ಮೌಲ್ಯಕ್ಷಯಕ್ಕೆ ಒಳಗಾಗಿರಬಹುದು ಎಂಬುದಕ್ಕೆ ಯಾವುದೇ ಸೂಚನೆ ಇದೆಯೇ ಎಂದು ಮೌಲ್ಯಮಾಪನ ಮಾಡುತ್ತದೆ.
* **ಗುರುತಿಸುವಿಕೆ:** ಆಸ್ತಿಯ ಬುಕ್ ಮೌಲ್ಯವು ಅದರ ಅಂದಾಜು ವಸೂಲಾತಿ ಮೊತ್ತಕ್ಕಿಂತ (ನಿವ್ವಳ ವಸೂಲಾತಿ ಮೌಲ್ಯ) ಹೆಚ್ಚಿರುವ ಮಟ್ಟಿಗೆ ಲಾಭ ಮತ್ತು ನಷ್ಟದ ಖಾತೆಯಲ್ಲಿ ಮೌಲ್ಯಕ್ಷಯದ ನಷ್ಟವನ್ನು (ಯಾವುದಾದರೂ ಇದ್ದರೆ) ಗುರುತಿಸಲಾಗುತ್ತದೆ ಮತ್ತು ಅದಕ್ಕೆ ನಿಬಂಧನೆ ಮಾಡಲಾಗುತ್ತದೆ. ಒಂದು ಆಸ್ತಿಯು ಮೌಲ್ಯಕ್ಷಯಗೊಂಡರೆ, ಅದರ ಬುಕ್ ಮೌಲ್ಯವನ್ನು ಅದಕ್ಕೆ ಅನುಗುಣವಾಗಿ ಕಡಿಮೆ ಮಾಡಲಾಗುತ್ತದೆ.

**8. ಕ್ಲೈಮ್‌ಗಳ ತೃಪ್ತಿಗಾಗಿ ಸ್ವಾಧೀನಪಡಿಸಿಕೊಂಡ ಬ್ಯಾಂಕಿಂಗೇತರ ಆಸ್ತಿಗಳು**

* **ಮೌಲ್ಯಮಾಪನ:** ಸುಸ್ತಿ ಸಾಲಗಾರರ ವಿರುದ್ಧದ ಕ್ಲೈಮ್‌ಗಳ ತೃಪ್ತಿಗಾಗಿ ಸಹಕಾರಿಯು ಸ್ವಾಧೀನಪಡಿಸಿಕೊಂಡ ಬ್ಯಾಂಕಿಂಗೇತರ ಆಸ್ತಿಗಳನ್ನು (ಸ್ಥಿರ ಆಸ್ತಿಗಳು ಅಥವಾ ಭೂಮಿಯಂತಹವು) ಅವುಗಳ ನಿವ್ವಳ ಬುಕ್ ಮೌಲ್ಯ ಅಥವಾ ನಿವ್ವಳ ವಸೂಲಾತಿ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದರಲ್ಲಿ ದಾಖಲಿಸಲಾಗುತ್ತದೆ (ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಪ್ರಕಟಿಸಿದ ಮಾರ್ಗಸೂಚಿ ಮೌಲ್ಯದಲ್ಲಿ).
* **ವಿಲೇವಾರಿ:** ಇಂತಹ ಆಸ್ತಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997 ರ ನಿಬಂಧನೆಗಳಿಗೆ ಅನುಗುಣವಾಗಿ ವಿಲೇವಾರಿ/ಹರಾಜು ಮಾಡುವ ಉದ್ದೇಶದಿಂದ ತಾತ್ಕಾಲಿಕವಾಗಿ ಹೊಂದಿರಲಾಗುತ್ತದೆ ಮತ್ತು ಅವುಗಳನ್ನು ಕಾರ್ಯಾಚರಣೆಯ ಸ್ಥಿರ ಆಸ್ತಿಗಳೆಂದು ಪರಿಗಣಿಸಲಾಗುವುದಿಲ್ಲ.

**9. ಪ್ರಸ್ತಾವಿತ ಲಾಭಾಂಶದ ಲೆಕ್ಕಪತ್ರ ನಿರ್ವಹಣೆ**

* **ನಷ್ಟ ಕಾಯ್ದಿರಿಸುವಿಕೆ ನಿಯಮ:** ಲೆಕ್ಕಪತ್ರ ಮಾನದಂಡ 4 (AS-4) (ಆಸ್ತಿ–ಜವಾಬ್ದಾರಿ ಪಟ್ಟಿಯ ದಿನಾಂಕದ ನಂತರ ಸಂಭವಿಸುವ ಘಟನೆಗಳು ಮತ್ತು ಸಂಭಾವ್ಯತೆಗಳು) ಗೆ ಅನುಗುಣವಾಗಿ, ಲಾಭಾಂಶಗಳನ್ನು ಆಸ್ತಿ–ಜವಾಬ್ದಾರಿ ಪಟ್ಟಿಯ ದಿನಾಂಕದ ನಂತರ ಪ್ರಸ್ತಾಪಿಸಿದರೆ ಅಥವಾ ಘೋಷಿಸಿದರೆ ಸಹಕಾರಿಯು ಹಣಕಾಸು ವರದಿಗಳಲ್ಲಿ ಲಾಭಾಂಶಕ್ಕಾಗಿ ಔಪಚಾರಿಕ ನಿಬಂಧನೆಯನ್ನು ಸೃಷ್ಟಿಸುವುದಿಲ್ಲ.
* **ಗುರುತಿಸುವಿಕೆ ಮತ್ತು ಪಾವತಿ:** ಲಾಭಾಂಶವನ್ನು ಅದರ ವಾಸ್ತವಿಕ ಪಾವತಿಯ ಹಣಕಾಸು ವರ್ಷದಲ್ಲಿ ಮಾತ್ರ ಜವಾಬ್ದಾರಿ ಮತ್ತು ಲಾಭದ ಹಂಚಿಕೆ ಎಂದು ಗುರುತಿಸಲಾಗುತ್ತದೆ, ಇದು ಈ ಕೆಳಗಿನವುಗಳಿಗೆ ಒಳಪಟ್ಟಿರುತ್ತದೆ:
* ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರ ಸೆಕ್ಷನ್ 34ರ ಅಡಿಯಲ್ಲಿ ಸೂಚಿಸಲಾದಂತೆ ರಿಸರ್ವ್ ಫಂಡ್ ಮತ್ತು ಇತರ ನಿಧಿಗಳಿಗೆ ಕಡ್ಡಾಯ ಶಾಸನಬದ್ಧ ಹಂಚಿಕೆಗಳು.
* ವಾರ್ಷಿಕ ಮಹಾಸಭೆಯಲ್ಲಿ (AGM) ಸದಸ್ಯರಿಂದ ಔಪಚಾರಿಕ ಅನುಮೋದನೆ ಮತ್ತು ಘೋಷಣೆ.
* ಲಾಭಾಂಶವು 3 ವರ್ಷಗಳಿಗಿಂತ ಹೆಚ್ಚು ಅವಧಿಗೆ ಪಾವತಿಯಾಗದೆ ಉಳಿದಿದ್ದರೆ, ವಾರ್ಷಿಕ ಮಹಾಸಭೆಯಲ್ಲಿ

(AGM) ಸದಸ್ಯರ ಔಪಚಾರಿಕ ಅನುಮೋದನೆ ಮತ್ತು ಘೋಷಣೆಯ ನಂತರ ಅಂತಹ ಲಾಭಾಂಶದ ಮೊತ್ತವನ್ನು ಶಾಸನಬದ್ಧ ರಿಸರ್ವ್ ಫಂಡ್ ಖಾತೆಗೆ ವರ್ಗಾಯಿಸಲಾಗುತ್ತದೆ.

**10. ಶಾಸನಬದ್ಧ ಮೀಸಲು ನಿಧಿಗಳು ಮತ್ತು ಹಂಚಿಕೆಗಳು**

* ಶಾಸನಬದ್ಧ ಮೀಸಲು ನಿಧಿಗಳಿಗೆ ಹಂಚಿಕೆ ಮಾಡಬೇಕಾದ ಮತ್ತು ನಿರ್ವಹಿಸಬೇಕಾದ ಮೊತ್ತವನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಸೊಸೈಟಿಯ ಉಪಕಾಯ್ದೆಗಳ ಪ್ರಕಾರ ನಿರ್ಧರಿಸಲಾಗುತ್ತದೆ ಮತ್ತು ಲೆಕ್ಕಹಾಕಲಾಗುತ್ತದೆ.

**11. ಸದಸ್ಯತ್ವ ಶುಲ್ಕಗಳು ಮತ್ತು ಷೇರು ಬಂಡವಾಳ**

* **ಪ್ರವೇಶ ಶುಲ್ಕಗಳು:** ಸೊಸೈಟಿಗೆ ಸೇರುವಾಗ ಸದಸ್ಯರಿಂದ ಸ್ವೀಕರಿಸಲ್ಪಟ್ಟ ಪ್ರವೇಶ ಶುಲ್ಕಗಳನ್ನು ಮರುಪಾವತಿಸಲಾಗದವು ಎಂದು ಪರಿಗಣಿಸಲಾಗುತ್ತದೆ ಮತ್ತು ಲಾಭ ಮತ್ತು ನಷ್ಟದ ಖಾತೆಯಲ್ಲಿ ನೇರವಾಗಿ ಆದಾಯ ಎಂದು ಗುರುತಿಸಲಾಗುತ್ತದೆ.
* **ಷೇರು ಬಂಡವಾಳ:** ಸದಸ್ಯರಿಂದ ಸ್ವೀಕರಿಸಲ್ಪಟ್ಟ ಷೇರು ಬಂಡವಾಳವನ್ನು ಮುಖಬೆಲೆಯಲ್ಲಿ ದಾಖಲಿಸಲಾಗುತ್ತದೆ. ಷೇರುಗಳ ಯಾವುದೇ ಹಿಂಪಡೆಯುವಿಕೆ ಅಥವಾ ವರ್ಗಾವಣೆಯನ್ನು ಸಹಕಾರಿಯ ಉಪಕಾಯ್ದೆಗಳು ಮತ್ತು KSS ಕಾಯ್ದೆ, 1997 ರ ನಿಬಂಧನೆಗಳಿಗೆ ಕಟ್ಟುನಿಟ್ಟಾಗಿ ಅನುಗುಣವಾಗಿ ಕಾರ್ಯಗತಗೊಳಿಸಲಾಗುತ್ತದೆ.

**12. ಠೇವಣಿ ಕ್ರೋಡೀಕರಣ ಮತ್ತು ಬಡ್ಡಿ ಸಂಚಯನ**

* **ಠೇವಣಿಗಳ ಮೇಲಿನ ಬಡ್ಡಿ ವೆಚ್ಚ:** ಸದಸ್ಯರ ಠೇವಣಿಗಳ ಮೇಲಿನ ಬಡ್ಡಿಯನ್ನು (ಉಳಿತಾಯ, ಸ್ಥಿರ ಮತ್ತು ಆವರ್ತಕ ಠೇವಣಿಗಳು ಸೇರಿದಂತೆ) ಸದಸ್ಯರಿಗೆ ವಾಸ್ತವಿಕವಾಗಿ ಪಾವತಿಸಿದ ದಿನಾಂಕವನ್ನು ಲೆಕ್ಕಿಸದೆ, ಒಪ್ಪಂದದ ದರಗಳಿಗೆ ಅನುಗುಣವಾಗಿ ಸಂಚಿತ ಆಧಾರದ ಮೇಲೆ (accrual basis) ವೆಚ್ಚ ಎಂದು ಗುರುತಿಸಲಾಗುತ್ತದೆ.

**ಖಾತೆಗಳ ಟಿಪ್ಪಣಿಗಳು (NOTES TO ACCOUNTS)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮತ್ತು ಸಹಕಾರ ಸಂಘಗಳ ಆಡಿಟ್ ನಿರ್ದೇಶಕರು ಕಡ್ಡಾಯಗೊಳಿಸಿದಂತೆ ಸಹಕಾರಿಯು ಹಣಕಾಸು ವರದಿಗಳ ಖಾತೆಗಳ ಟಿಪ್ಪಣಿಗಳಲ್ಲಿ ಎಲ್ಲಾ ಪ್ರಸ್ತುತ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಗಳನ್ನು ಬಹಿರಂಗಪಡಿಸತಕ್ಕದ್ದು.

ಈ ಬಹಿರಂಗಪಡಿಸುವಿಕೆಗಳು ಇತರ ಅನ್ವಯವಾಗುವ ಶಾಸನಗಳು, ನಿಯಮಗಳು ಅಥವಾ ಲೆಕ್ಕಪತ್ರ ಮತ್ತು ಹಣಕಾಸು ವರದಿ ಮಾನದಂಡಗಳ (ಆದಾಯ ತೆರಿಗೆ ಕಾಯ್ದೆ, 1961 ಮತ್ತು ICAI ಲೆಕ್ಕಪತ್ರ ಮಾನದಂಡಗಳಂತಹ) ಅಡಿಯಲ್ಲಿನ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳಿಗೆ ಪೂರಕವಾಗಿರಲು ಉದ್ದೇಶಿಸಲಾಗಿದೆಯೇ ಹೊರತು, ಅವುಗಳನ್ನು ಬದಲಿಸಲು ಅಲ್ಲ. ಶಾಸನಬದ್ಧ ಮಾರ್ಗಸೂಚಿಗಳ ಅಡಿಯಲ್ಲಿ ಅಗತ್ಯವಿರುವ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚು ಸಮಗ್ರವಾದ ಬಹಿರಂಗಪಡಿಸುವಿಕೆಗಳನ್ನು ಪ್ರೋತ್ಸಾಹಿಸಲಾಗುತ್ತದೆ, ವಿಶೇಷವಾಗಿ ಇಂತಹ ಬಹಿರಂಗಪಡಿಸುವಿಕೆಗಳು ಸದಸ್ಯರು, ಆಡಿಟರ್‌ಗಳು ಮತ್ತು ನಿಯಂತ್ರಕರಿಗೆ ಸಹಕಾರಿಯ ಹಣಕಾಸಿನ ಸ್ಥಿತಿ, ಆಸ್ತಿಯ ಗುಣಮಟ್ಟ ಮತ್ತು ಒಟ್ಟಾರೆ ಕಾರ್ಯಕ್ಷಮತೆಯನ್ನು ಅರ್ಥಮಾಡಿಕೊಳ್ಳಲು ಗಣನೀಯವಾಗಿ ಸಹಾಯ ಮಾಡುವುದಾದರೆ.

ದಿನಾಂಕ 11–08–2026 ರ ಆಡಳಿತ ಮಂಡಳಿಯ ನಿರ್ಣಯ ಸಂಖ್ಯೆ 87/2026–27 ರ ಪ್ರಕಾರ ಅನುಮೋದಿಸಲಾಗಿದೆ.

ದಿನಾಂಕ 20–09–2026 ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ 14/2025–26 ರ ಪ್ರಕಾರ ಅಂಗೀಕರಿಸಲಾಗಿದೆ.

## 2025–26ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಸನ್ಮಾನ್ಯ ಸದಸ್ಯರೇ,

ಸದಸ್ಯರೆಲ್ಲರ ಸಹಕಾರದಿಂದ ಸಂಘವು ನಿರಂತರ ಪ್ರಗತಿಯಲ್ಲಿ ಮುಂದುವರೆಯುತ್ತಿದ್ದು, 31–03–2026ಕ್ಕೆ ಅಂತ್ಯಗೊಂಡ ವರದಿ ವರ್ಷದ ಅಂಕಿ–ಅಂಶಗಳು ಹಾಗೂ ನಿರ್ದೇಶಕ ಮಂಡಳಿ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷವಾಗುತ್ತಿದೆ.

**1. ದುಡಿಯುವ ಬಂಡವಾಳ :**

31–03–2026 ರಂದು ಅಂತ್ಯಗೊಂಡ ಸಹಕಾರಿ ವರ್ಷದಲ್ಲಿ ಸಂಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಿದ್ದು ದುಡಿಯುವ ಬಂಡವಾಳವು **ರೂ. 113.61** ಕೋಟಿ ದಾಖಲಾಗಿದೆ. ಕಳೆದ ಸಾಲಿನಲ್ಲಿ ಇದು **100.80** ಕೋಟಿ ಆಗಿತ್ತು.

**2. ಸದಸ್ಯತ್ವ ಮತ್ತು ಪಾಲು ಬಂಡವಾಳ :**

ಕಳೆದ ಸಾಲಿನಲ್ಲಿ **ರೂ. 2.66** ಕೋಟಿಯಿದ್ದ ಪಾಲು ಬಂಡವಾಳವು **ರೂ. 2.76** ಕೋಟಿಗೆ ಏರಿಕೆಯಾಗಿದೆ. ವರದಿ ಸಾಲಿನಲ್ಲಿ ಸದಸ್ಯರ ಸಂಖ್ಯಾ ವಿವರ ಈ ಕೆಳಗಿನಂತಿದೆ.

| ಸದಸ್ಯ ವರ್ಗ | ವರ್ಷಾರಂಭದಲ್ಲಿ | ಸೇರ್ಪಡೆ | ರದ್ಧತಿ | ವರ್ಷಾಂತ್ಯದಲ್ಲಿ |
|---|---|---|---|---|
| ಅ | 3891 | 268 | 45 | 4114 |
| ಬ | 594 | 3 | 29 | 568 |
| ಕ | 3832 | 122 | –– | 3954 |

**3. ಸದಸ್ಯರ ಠೇವಣಾತಿಗಳು ಹಾಗೂ ಸಾಲಗಳು :**

ಸದಸ್ಯರ ಸಹಕಾರದಿಂದ ವರದಿ ವರ್ಷಾಂತ್ಯಕ್ಕೆ ಎಲ್ಲಾ ವಿಧದ ಠೇವಣಿಗಳ ಮೊತ್ತ **ರೂ. 104.30** ಕೋಟಿಗಳಾಗಿದ್ದು ಸದಸ್ಯರ ಹೊರಬಾಕಿ ಸಾಲ **ರೂ. 89,44,70,037/–** ಗಳಾಗಿರುತ್ತವೆ. ಒಟ್ಟು ಹೊರಬಾಕಿ ಸಾಲದಲ್ಲಿ **ರೂ. 6,76,21,661/–** ಸುಸ್ತಿ ಸಾಲವಾಗಿದ್ದು, ಸುಸ್ತಿ ಸಾಲದ ಪ್ರತಿ ಶತ ಪ್ರಮಾಣ **7.56** ಆಗಿದೆ. ಕಳೆದ ಸಾಲಿನಲ್ಲಿ ಇದು **ಶೇ. 6.03** ಆಗಿತ್ತು **(ರೂ 4,94,56,987)**.

ಸಂಘದ ಠೇವಣಿಗಳು **100 ಕೋಟಿ** ದಾಟಿದ ಸಂಭ್ರಮಾಚರಣೆಯನ್ನು ದಿನಾಂಕ 28–11–2025 ರಂದು ಆಚರಿಸಲಾಯಿತು. ಶ್ರೀ ಸಂಸ್ಥಾನ ಗೌಡ ಪಾದಾಚಾರ್ಯ ಕೈವಲ್ಯ ಮಠಾಧೀಶರಾದ ಶ್ರೀಮದ್ ಶಿವಾನಂದ ಸರಸ್ವತಿ ಸ್ವಾಮೀಜಿಯವರು ಸಂಘದ ಪ್ರಧಾನ ಕಚೇರಿಗೆ ಚಿತ್ತೈಸಿ, ದೀಪ ಬೆಳಗಿಸಿ ಸಂಘಕ್ಕೆ ಶುಭ ಕೋರಿ ಆಶೀರ್ವದಿಸಿದರು.

**4. ವಿನಿಯೋಗಗಳು**

ಸಹಕಾರಿಯ ಶಾಸನಬದ್ಧ ನಿಧಿಗಳನ್ನು ಹಾಗೂ ಹೆಚ್ಚುವರಿ ಠೇವಣಿಗಳನ್ನು ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18(ಬಿ) ಯನ್ವಯ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಾಯಿಸಲ್ಪಟ್ಟ ಸಹಕಾರಿ ಬ್ಯಾಂಕ್‌ಗಳಲ್ಲಿ ವಿನಿಯೋಗಿಸಲಾಗಿದ್ದು ವರ್ಷಾಂತ್ಯಕ್ಕೆ ಅವುಗಳ ಮೊತ್ತ **ರೂ. 30,93,00,000/–** ಆಗಿದ್ದು ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಸಂಸ್ಥೆಯ ವಿವರ | ಹೂಡಿಕೆ ಮೊತ್ತ ರೂ. |
